ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦

ಬಿಡಿ ಪ್ರತಿ ಕೇವಲ ಆಣೆ ೦—೨—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ, ಬಹಳ ಸಹಾಯ ಮಾಡಿದಂತಾಗುವುದು.

ವಿಷಯಾನುಕ್ರಮಣಿಕೆ

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ


ಕೂಡಿರುವುದೇ


ಬೆಂಗಾಲ್ ಲ್ಯಾಂಪ್ಸ್


ತಯಾರಿಕೆಯ ವೈಶಿಷ್ಟ್ಯ

ಭಾರತದಲ್ಲೆಲ್ಲಾ ಉತ್ತಮವಾದುದೆಂದು

ಖ್ಯಾತಿಪಡೆದಿದೆ




Toilet
Soap



ಒಂದು ದಿನ

ಅವನು ಕಾಲೇಜಿಗೆ ಹೋಗುವನು

ಈಗಿನಿಂದ ಇನ್ನು 20 ವರ್ಷಗಳಿಗೆ ಅವನು ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಲು ಹೋಗುವನು. ವ್ಯಾಪಾರ ಅಥವಾ ಔದ್ಯೋಗಿಕ ಪ್ರಪಂಚದಲ್ಲಿ ವಿಶ್ವವಿದ್ಯಾಲಯದಲ್ಲಿ ತರಪೇತಾದವರನ್ನೇ ಆರಿಸುವರು.

ನೀವು ಬಹು ಸುಲಭವಾದ ಮತ್ತು ಕ್ರಮವಾದ ರೀತಿಯಲ್ಲಿ ಹಣವನ್ನು ಕೂಡಿಡುವುದರಿಂದ ಅವನು ಸಂಸ್ಕೃತಿಯಲ್ಲೂ ಜ್ಞಾನದಲ್ಲೂ.......ಶಾಸ್ತ್ರೀಯದಲ್ಲೂ ಸಾಮಾಜಿಕದಲ್ಲೂ ಸಿದ್ಧತೆ ಹೊಂದಿ ಅಮೌಲ್ಯವಾದ ಜಯವನ್ನು ಪಡೆಯುವನು.

ಅವನ ವಿದ್ಯಾಭ್ಯಾಸಕ್ಕಾಗಿ

ಮೈಸೂರು ಸರ್ಕಾರದ ಜೀವವಿಮಾ ಶಾಖೆಯ ಮೂಲಕ

ಕೂಡಿಡಿ


ಕೆಳಗಿನ ವಿಳಾಸಕ್ಕೆ ಬರೆದರೆ ಸಂತೋಷದಿಂದ ವಿವರಗಳು ಕೊಡಲ್ಪಡುವುವು.

ಸೆಕ್ರೆಟೆರಿ,

ಮೈಸೂರು ಸರ್ಕಾರಿ ಜೀವವಿಮಾ ಶಾಖೆ, ಬೆಂಗಳೂರು

[ಮೈಸೂರಿನವರಿಗೆಲ್ಲಾ ತೆರದಿದೆ]

ಕೊರವಂಜಿ



ಜೂನ್ ೧೯೪೪

ಮಾಸ ಪತ್ರಿಕೆ

ಸಂಪಾದಕರು :
ಶ್ರೀ|| ರಾ. ಶಿ.


ಚಿತ್ರಕಾರರು :
ಶ್ರೀ|| ಆರ್. ಕೆ. ಲಕ್ಷ್ಮಣ್.

ಬರಹಗಾರರು :

ಶ್ರೀ|| ನಾ. ಕ.
ಶ್ರೀ|| ಪಾತಾಳಿ.
ಶ್ರೀಮತಿ ರುದ್ರಮ್ಮ
ಶ್ರೀ|| ಎಸ್. ಎನ್. ಶಿ.
ಶ್ರೀ|| ಬಿ. ಚಂ.
ಶ್ರೀ|| ವೆಂಕಪ್ಪ
ಶ್ರೀ|| ಬಿ. ವಿ. ಸು.
ಶ್ರೀ|| ಜ ರಾ ಶ್ರೀ.
ಶ್ರೀ|| ಬೀರಣ್ಣ

ಬಿಡಿ ಪತ್ರಿಕೆ -- ಕೇವಲ ಎರಡಾಣೆ

ನಗೆಯ ಮಾಸ ಪತ್ರಿಕೆ.



ಸಂಪುಟ ೩] ಕೊರವಂಜಿ—ಜೂನ್ ೧೯೪೪ [ಸಂಚಿಕೆ ೩

ಕುಹಕಿಡಿಗಳು

ಯುದ್ಧ ಶುರುವಾದಾಗಿನಿಂದ ಸ್ನೇಹಿತರೂ ಹೆಚ್ಚಾಗುತ್ತಿದ್ದಾರೆ ಎಂದು ಬರಹಗಾರನೊಬ್ಬನ ಅಭಿಪ್ರಾಯ.

—ಯುದ್ಧ ಶುರುವಾದ ಮೇಲೋ—ರೇಷನ್ ಶುರುವಾದ ಮೇಲೋ—

✤ ✤ ✤

ಇಂಗ್ಲೆಂಡಿನಿಂದ ನಮಗೆ ಬಹಳ ಸಹಾಯ ದೊರೆತಿದೆಯಂತೆ.

—ಅಮೆರಿಯವರೂ ದೊರೆತಿದ್ದಾರೆ— ಅಂದ ಮೇಲೆ ಋಣ ತೀರಿದ ಹಾಗಾಯ್ತಲ್ಲ

✤ ✤ ✤

ಸಾರ್ವಜನಿಕ ಚುನಾವಣೆಗಳು ೧೯೪೫ ರಲ್ಲಿ ನಡೆಯುವುದಂತೆ.

—ಕೆಲವು ಸಚಿವರ ಸಂದರ್ಶನವು ಈಗ ಸುಲಭಸಾಧ್ಯ!

✤ ✤ ✤

ತಮಿಳಿನಲ್ಲಿ ೩೬ ಅಕ್ಷರಗಳೇ ಇವೆಯಂತೆ.

—ಅದಕ್ಕೇ ಅಷ್ಟು ಬೇಗ ಬೇಗ ಮಾತನಾಡಿ ಇದ್ದ ಅಕ್ಷರಗಳಲ್ಲೇ ಸಾಕು ಮಾಡಿಕೊಳ್ಳುತ್ತಾರೆ.

ಚಿನ್ನದ ಬೆಲೆಯ ಏರಿಳಿತಗಳು ಬಹಳವಾಗಿದೆಯಂತೆ.

—ನಮಗೇನು, ಸ್ಮಟ್ಸರೂ, ಬ್ರಿಟನ್ನರೂ ಗುದ್ದಾಡಲಿ.

* * *

ವಾರ ಭವಿಷ್ಯದವರಿಲ್ಲಾ ಏನಾದರು ಎಂಬ ಪ್ರಶ್ನೆ—

—ಸಮರ ಸುದ್ದಿಗಾರರಾಗಿದ್ದಾರೆ.

* * *

ಮೊನ್ನಿನ ದಿನ ನಡೆದ ಭಾರಿ ಕಳ್ಳತನದಲ್ಲಿ ಕಳ್ಳರು ಆಹಾರ ಸಾಮಗ್ರಿಗಳನ್ನು ಮಾತ್ರ ಕದ್ದೊಯ್ದಾರಂತೆ.

—ಕಳ್ಳರ ಕಾಟ ತಪ್ಪಿಸಿಕೊಳ್ಳಲು ಆಹಾರ ಸಾಮಗ್ರಿಗಳನ್ನು ಮನೆಯಾಚೆ ಇಡುವುದು ಒಳಿತು.

* * *

ನಾಗರೀಕತೆಯು ಹೆಚ್ಚುತ್ತಿದೆಯಂತೆ—

ಕಾವಲು ನಾಯಿಗಳನ್ನಿಟ್ಟರೆ—ಕಳ್ಳರು ಕಾವಲು ನಾಯಿಗಳನ್ನೇ ಕದಿಯುತ್ತಿದ್ದಾರಂತೆ.

* * *

ಅಂತರ್ರಾಷ್ಟ್ರೀಯ ಶಾಂತಿ ಸಮ್ಮೇಳನವು ಇನ್ನುಮೇಲೆ ಜರ್ಮನಿಯಲ್ಲಿ ನಡೆಯುವುದಂತೆ.

* * *

ಸೇಂದಿ ಬಾಬಿನಿಂದ ಬಂದ ಅಧಿಕ ಲಾಭದಲ್ಲಿ ಒಂದು ಭಾಗವನ್ನು ಪಾನ ನಿರೋಧ ಚಳುವಳಿಗಾಗಿ ಮೀಸಲಿಡಬೇಕೆಂದು ಹಲವರ ಅಭಿಪ್ರಾಯವಂತೆ.

* * *

ಮಳೆ ಬಂದಾಗ ಮಳೆ ಹುಳುಗಳ ಕಾಟ,
ಬೆಳೆ ಬಂದಾಗ ವರಮಾನ ತೆರಿಗೆಯವರ ಕಾಟ.

—o—

ಉರಿಗಾಳು

"ಪ್ರಾಣ ಹೋಗುವಾಗಲೂ ವೀಣೆ ಬಾರಿಸುತ್ತೇನೆ" ಅಂದರು ಒಬ್ಬರು........ ಯಾರ ಪ್ರಾಣ ?

✤ ✤ ✤

ಮನಃಶಾಸ್ತ್ರ ಸಂಶೋಧಕರೊಬ್ಬರು ಪರೀಕ್ಷಾರ್ಥವಾಗಿ ಒಂದು ಕೋತಿ ಮರಿಯನ್ನು ತಮ್ಮ ಮಕ್ಕಳ ಜೊತೆಗೆ ಸಾಕುತ್ತಿದ್ದಾರಂತೆ !........"ಅಯ್ಯೋ ! ಪಾಪ, ಅದನ್ನು ದೇವರೇ ಕಾಪಾಡಬೇಕು."

✤ ✤ ✤

"ಆ ನಗರದಲ್ಲೂ ಈ ನಮ್ಮ ನಗರದ ಹಾಗೆ ಖಾಸಗಿ ಅಧ್ಯಕ್ಷರಿದ್ದರೆ ಆಗ ಎಲ್ಲವೂ ಸರಿಹೋಗುವುದು" (ಪತ್ರಿಕೆ) ....ಬಾಲ ಹೋದ ನರಿಯ ಸಮಾಚಾರ ?

✤ ✤ ✤

"ಹುಲಿ ಚರ್ಮ ಯಾರಿಗೆ ಬೇಕಾಗಿದೆ ?" (ಜಾಹಿರಾತು) ಗೊತ್ತೇ ಇದೆ........ ಹುಲಿಗಳಿಗೆ.

✤ ✤ ✤

ಪ್ರಸಿದ್ಧ ಕೆ. ಡಿ. ಯೊಬ್ಬನನ್ನು ಬಂಧಿಸಿ ಶೋಧನೆ ಮಾಡಿದಾಗ, ಅವನು ಕನ್ನ ಹಾಕಲು ಉಪಯೋಗಿಸುತ್ತಿದ್ದ ಅನೇಕ ಸಾಮಗ್ರಿಗಳನ್ನು ವಶಪಡಿಸಲಾಯಿತು. (ಪತ್ರಿಕೆ)........ಅಂತು, ಇಂತು, ನಮಗೆ ಭೀತಿ ತಪ್ಪಿಲ್ಲ !

✤ ✤ ✤

"ರೈಲು ಪ್ರಯಾಣ ಮಾಡಬೇಡಿ" ಎಂದು ಸಾವಿರಾರು ರೂಪಾಯಿ ವೆಚ್ಚ ಮಾಡಿ, ಜಾಹಿರಾತುಗಳನ್ನು ಹೊರಡಿಸುವುದರ ಬದಲು ನಮ್ಮ ಸಲಹೆಯನ್ನು ರೈಲಿನವರು ಅನುಸರಿಸಲಿ: ಈಗಿನ ರೈಲುಗಳಲ್ಲಿ ಪ್ರತಿಯೊಬ್ಬರನ್ನೂ ಒಂದು ಸಾರಿ ಉಚಿತವಾಗಿ ಪ್ರಯಾಣ ಮಾಡಿಸಲಿ, ಸಾಕು."

✤ ✤ ✤

"ತರುಣ ತರುಣಿಯರು ಕತ್ತಲಲ್ಲಿ ಕೂಡಬಾರದು." (ಉಪನ್ಯಾಸ) ಮತ್ತೆ ಅವರು ಸಿನಿಮಾಗಳಿಗೆ ಬರುವುದೇತಕ್ಕೆ ?

✤ ✤ ✤

"ಸಂಗೀತದ ಸವಿ ಹಾಡಿನ ಭಾಷೆಯಿಂದಲ್ಲ" ಎಂದು ಒಬ್ಬರು ವಿದ್ವಾಂಸರು ಹೇಳಿದರು. ಆದ್ದರಿಂದಲೇ ನಮ್ಮವರು ಕನ್ನಡ ಹಾಡುಗಳನ್ನೇ ಕೈಬಿಟ್ಟಿರುವುದು.

✤ ✤ ✤

"ಕಳೆದ ವರ್ಷ ಬೊಂಬಾಯಿ ನಗರದ ಸಿಟಿ ಬಸ್ಸುಗಳಲ್ಲಿ ಎರಡು ಹೆರಿಗೆಗಳಾದುವು" ಎಂದು ಬಿ ಇ. ಎಸ್. ಟಿ ಅಧಿಕಾರಿಗಳೊಬ್ಬರು ಹೇಳಿದರು. ನಮ್ಮ ಬಸ್ಸುಗಳಲ್ಲಿ ಪ್ರಯಾಣ ಮಾಡುವವರಿಗೆ ಹೆರಿಗೆಯ ಅವಶ್ಯಕತೆಯೇ ಇರುವುದಿಲ್ಲ.

✤ ✤ ✤

ಈ ಸಲ ವಿಶ್ವವಿದ್ಯಾನಿಲಯದ ಪರೀಕ್ಷಾ ಫಲಗಳನ್ನು ಸೋಮವಾರ ಪ್ರಕಟಿಸಿದರು......."ಕುರ್ವೀತ ಬುಧಸೋಮಯೋಃ"

✤ ✤ ✤

ಗೆಳೆಯರೊಂದಿಗೆ ಪಂದ್ಯ ಹೂಡಿ ಮೊನ್ನೆ ಒಬ್ಬಾತ ಒಂದು ಪಂಚೇರು ಬೆಳ್ಳುಳ್ಳಿ ತಿಂದ......... ಇನ್ನೂ ಆತನನ್ನು ಹತ್ತಿರ ಹೋಗಿ ಮಾತನಾಡಿಸಲು ಒಬ್ಬರಿಗೂ ಧೈರ್ಯ ಬಂದಿಲ್ಲ.

ಶತ್ರುಗಳ ಆಕ್ರಮಣವನ್ನು ತಡೆದು ನಿಲ್ಲಿಸಿ ಅವರನ್ನು ಹಿಂದಕ್ಕಟ್ಟಿಸಲು ಒಬ್ಬರು ರಾಜರು ಮರದ ವಿಗ್ರಹವೊಂದನ್ನು ಕೆತ್ತುತ್ತಿರುವರು. ಅಂತಹ ನೂರಾರು ವಿಗ್ರಹಗಳನ್ನು ಸಪ್ಲೈ ಮಾಡಲು ಸಾಧ್ಯವೆ, ಎಂದು ಅವರನ್ನು ಕೇಳಿರುವುದು ಸುಳ್ಳಂತೆ

✤ ✤ ✤

ಜಪಾನ್ ದೇಶದಲ್ಲಿ ದಂತವೈದ್ಯರನೇಕರು ಮಹಿಳೆಯರಂತೆ........ಮಹಿಳೆಯರಿಂದ ಹಲ್ಲು ಕೀಳಿಸಿಕೊಂಡವರು ನಮ್ಮಲ್ಲೂ ಅನೇಕರಿದಾರೆ.

✤ ✤ ✤

ಅಂಗಳದ ಸುಮ

ಅಂಗಳದ ಸುಮದಂತೆ
ಹೆಂಗಳಾ ಹೆರಳಲ್ಲಿ
ನಾನು ವಿಕಸಿಸುವಂತೆ
ಜಾತಕವ ಸರಿಪಡಿಸು—ಗುರುವೇ, ಹೇ ದೇವ!

ಜನಕೆ ಸೇವೆಯ ಮಾಡಿ,
ತನುಮನಗಳನೇ ತೆತ್ತು,
ತರುಣ ನಾನೆಂತೆಂಬ
ತಣಿವನೀಡುತ ನನಗೆ, ಪೊಗಳಿಕೆಯ ಕೊಡುಬಿಡದೆ!

ಕಾನನದಿ ತಾಪಸರು
ಮೌನದಿಂ ಭಜಿಸಿ—ನಿಜ
ತೇಜವನು ಬೆಳೆಸಿ—ನಲವಿಂ
ತಾವೆಲೆ ಮನೆಯ ಹಿಂದಿಂದ
ಹೊರಬಂದು, ನಮ್ಮಗಳ
ಮನವನುಜ್ಜೀವಿಸಿ ಕೃತಕೃತ್ಯತೆಯ ಪಡೆವಂತೆ—ಅಂಗಳದ....

ಉಪಕಾರಿ ನಾನು, ಎ
ನ್ನುಪಕಾರದಿಂದೀ ಜಗವು
ವಿಪರೀತದಿಂದುಳಿದು
ವಿಪುಲ ಭಾಗ್ಯವ ಪಡೆದು
ಸುಫಲ ಸುಮಭರಿತ ಪಾ
ದಪಂತಾಯ್ತೆಂಬ ನಂಬಿಕೆಯು ಬರುವ ವೊಲು—ಅಂಗಳದ.

—ಪಾಠಾಳಿ.

———o———

ನನ್ನ ಕುರ್ಚಿ

ಎಂತೆಂಥಾವರು ಬಂದಾಗಲೂ ಕುರ್ಚಿಕೊಟ್ಟು ಕೂಡಿಸುವ ನಾನು, ಬಂಗಾಳಿಗಳು ಬಂದರೆ ಬಿಟ್ಟೇನೆಯೇ? ಬಂಗಾಳಿ ಅಂತ ಆತನೇ ಹೇಳಿಕೊಂಡರೂ ಕೂಡ, ನನಗೆ ಮೊದಮೊದಲು ಕೊಂಚ ಅನುಮಾನ. ಕಡೆಗೆ ಬಂಗಾಲದ ದೆಸೆಯಿಂದ ಆತನೂ ನಮ್ಮೂರಿನವರ ಹಾಗಾಗಿರಬಹುದು, ಎಂದುಕೊಂಡೆ. ಮೈಸೂರಿನವರ ಗೆಳೆತನದಿಂದ ನನ್ನ ಮಾತಿನ ರೀತಿ ಕೂಡ ಬದಲಾಯಿಸಿದೆ, ಅಂತ ಆತನೇ ಹೇಳಿದಾಗ ನನ್ನ ಸಂದೇಹವೆಲ್ಲ ಪರಿಹಾರವಾಯಿತು. ನನ್ನ ಕುರ್ಚಿಯನ್ನ ಆತನ ಹತ್ತಿರಕ್ಕೆ ಎಳೆದುಕೊಂಡೆ. ಬಂಗಾಳದ ದುಃಸ್ಥಿತಿ, ಆತ ತನ್ನ ಮಕ್ಕಳುಮರಿಗಳನ್ನೇ ಮಾರಿ ಮೂರು ತಿಂಗಳು ಕೂಳೊದಗಿಸಿಕೊಂಡಿದ್ದು, ಎಲ್ಲವನ್ನೂ ವಿವರಿಸಿದ. ವಿವರಿಸುತ್ತ, ವಿವರಿಸುತ್ತ, ನನಗೆ ಯಾಕೊ, ಆತ ಶುದ್ಧ ಮೋಸಗಾರ, ಠಕ್ಕ, ವೇಷಾಂಧಭೂತಿ ಎಂದು ತೋಳೆಯಿತು. ಅಂದರೆ, ಅಷ್ಟು ಬೇಗನೆ ಹೋಳೆಯಲಿಲ್ಲ, ನಿಧಾನವಾಗಿ ಹರಿಯಿತು. ಯುದ್ಧದ ದೆಸೆಯಿಂದ ನನ್ನ ಸಂಬಳವೂ ಕೂಡ ಕಾಲು ಭಾಗಕ್ಕಿಳಿದಿದೆ, ಬರಗಾಲ ಬಂದು ನನ್ನ ಬಾಗಿಲನ್ನೂ ಬಡಿದಿದೆ, ಎಂದು ಹೇಳಿ, ಹೆಗಲ ಮೇಲೆ ಟವಲು ಹಾಕಿಕೊಂಡೆ. ಆತ ಎದ್ದು ಮಾತನಾಡಿದ. ನಾನು ಕೈಗೆ ಕತ್ತಿ ತೆಗೆದುಕೊಂಡೆ. ಆತ ಒಂದು ಹೆಜ್ಜೆ ಹಿಂದಕ್ಕೆ ಹಾಕಿದ. ಹೊರಗೆ ಹೊರಡುತ್ತಲೂ ನಾನು ನನ್ನ ಹಳೇ ಬ್ರಷ್ ತೆಗೆದು, ಒಡಕು ಕನ್ನಡಿ ಮುಂದೆ ಕ್ಷೌರಕ್ಕೆ ಕುಳಿತೆ........

ಏಳೆಂಟು ದಿನಗಳ ಅನಂತರ, ನನ್ನ ರೂಮಿನೊಳಕ್ಕೆ ಒಬ್ಬ ಬರ್ಮ ಸಾಹುಕಾರ ಬಂದ. ಸರಿ, ಅದೇ ಕುರ್ಚಿಯನ್ನ ಅವನ ಕೆಳಗಿಟ್ಟು, ಇಂಗ್ಲೀಷ್ ಬರುತ್ತೋ ಅಂತ ಕನ್ನಡದಲ್ಲಿ ಕೇಳಿದೆ. "ಹೂಂ" ಅಂತ ತಲೆ ಅಲ್ಲಾಡಿಸಿದ. ಪುಡಿಕಾಸು ಕೈಯಲ್ಲಿಲ್ಲದಿದ್ದರೂ, ಕೊಡಗೈ ಎಂಬ ಕೀರ್ತಿಯಾದರೂ ನನಗಿರುವುದಕ್ಕಾಗಿ ನಾನು ಹಿಗ್ಗಿದೆ ನನ್ನ ಮನೆಗೆ ನುಗ್ಗಿ ಹೋಗಬೇಕೆಂದು ಪಬ್ಲಿಕ್ ಪ್ರಾಸಿಕ್ಯೂಟರ್‌ರವರೇ ಆತನಿಗೆ ಸೂಚನೆ ಕೊಟ್ಟರಂತೆ. ಸ್ನೇಹ ಅಂದರೆ ಹೀಗಿರಬೇಕಯ್ಯ, ಎಂದು ನಾನು ಆತನಿಗೂ ಹೇಳಿದೆ. ಸರಿ! ಅವನ ಗೋಳ್ಕತೆ ಪ್ರಾರಂಭವಾಯಿತು. ಆತನ ನಾಲಿಗೆ ನುಲಿದದ್ದು ಸುಮಾರು ನಮ್ಮದರ ಹಾಗೇನೆ. ಮಿಂಗ್ ಯಾಂಗ್ ಕ್ಯೂಂಗ್ ಎಂಬ ಮಾರ್ಜಾಲ ಶಬ್ದವೇ ಇಲ್ಲದೆ, ಆತ ತನ್ನ ಊರು, ಕೇರಿ, ಕುಲ, ಗೋತ್ರ ಎಲ್ಲವನ್ನೂ ಒಪ್ಪಿಸಿದ ಆತನ ತಂದೆ ಹೆಸರು ಉ ಸಾ ಬಾ ಆಗಿರಲಿಲ್ಲ; ತಾಯಿಯ ಹೆಸರು ಚೇರ್ಟಿಲೀ ಕಾ ಆಗಿರಲಿಲ್ಲ. 'ಸಂಶಯಾತ್ಮಾ ವಿನಶ್ಯತಿ,' ಸರಿ! ಆದರೂ, ಹಾಳು ವಿನಶ್ಯತಿ ದಾರಿಯನ್ನೇ ನನ್ನ ಆತ್ಮ ಹಿಡಿಯಿತು. ಬರ್ಮಾದಿಂದ ಇಂಡಿಯಾ ದೇಶಕ್ಕೆ ಬರುವಾಗ ದಾರಿಯಲ್ಲಿ ಆತನಿಗೆ ಸಿಕ್ಕಿದ ಊರುಗಳ ಹೆಸರನ್ನು ಆತ ಹೇಳಿದ. ಅವು ನನಗೂ ಈಚಿನ ಬಾತ್ಮಿಗಳ ಮೂಲಕ ಪರಿಚಿತವಾಗಿತ್ತು.

"ತಥಿಂ ಎಂಬ ಒಂದು ಊರನ್ನು ಸೇರಿದಾಗ" ಎಂದು ಆತ ಹೇಳುತ್ತಲೂ, ನಾನು ಎದ್ದೆ. ಭುಜಕ್ಕೆ ಟವಲು ತಗುಲಿಸಿದೆ. ಚಪ್ಪಲಿಗಳೊಳಕ್ಕೆ ಪಾದಗಳನ್ನು ತುರುಕಿ ಆತ ಪರಾರಿದ. ಪಾದಗಳನ್ನು ನೋಡುತ್ತೇನೆ........ಸಾಕ್ಷಾತ್ ಕನ್ನಡನಾಡಿನದು, ಎರಡೂವೆ !.......

ಮೊನ್ನೆ ಒಬ್ಬರು ಮಹನೀಯರು, ಮತ್ತೆ ಅದೇ ಕುರ್ಚಿಯ ಖುಷಿಗಾಗಿ ನನ್ನ ರೂಮಿನೊಳಕ್ಕೆ ಚಿತ್ತೈಸಿದರು. ಅಂತು ಈ ಕುಚೇಲನನ್ನ ಕುಬೇರ ಅಂತ ತಿಳಿದು ಮೋಸ ಹೋಗಿ, ನನ್ನ ಮಕ್ಕಳ ಹೊಟ್ಟೆಮೇಲೆ ಹೊಡೆಯುವ ಆಸೆಯಿಂದ, ಈ ಪ್ರಭೃತಿಗಳು ಎಲ್ಲಿಂದೆಲ್ಲ ಬರುತ್ತಾರೆ ? ಅಂತೀನಿ. ಮೊನ್ನೆ ಬಂದವನು ಬೊಂಬಾಯಿ ಅಪೋಲೊ ಬಂದರಿನಲ್ಲಿದ್ದನಂತೆ. ಯಾಕಿದ್ದ? ನಾನು ಹೇಳಿದ್ದೆನೇ ? ನನ್ನ ಕೇಳಿದ್ದನೆ ? ಆಸ್ಫೋಟನದ ಸಮಯದಲ್ಲಿ ಅವನ ಕಾರು ಮೇಲೆದ್ದು ಪಕ್ಕಕ್ಕೆ ನುಗ್ಗಿ ಒಂದು ಮನೆ ಗೋಡೆ ಒಡೆದು ಒಳಗೆ ಪ್ರವೇಶಮಾಡಿತಂತೆ. ಆಸ್ಪತ್ರೆಯಲ್ಲಿ ಹದಿನೈದು ದಿನವಿದ್ದು, ಕಳೆದುಕೊಂಡ ಜ್ಞಾನವನ್ನು ಮತ್ತೆ ಸಂಪಾದಿಸಿ ಇತ್ತಕಡೆ ಬಂದನಂತೆ. ಕೋಟ್ಯಾಧೀಶ್ವರನಾಗಿದ್ದವನ ಕೈಲಿ ಈಗ ಒಂದು ಕಾಗದದ ಚೂರೂ ಇಲ್ಲವಂತೆ........ಇತ್ಯಾದಿ........ಇತ್ಯಾದಿ. ಕತೆ ಬೆಳೆಯುತ್ತ ಬೆಳೆಯುತ್ತ ನನಗೆ ಆ ಧ್ವನಿಯನ್ನು ಹಿಂದೆ ಎಲ್ಲೋ ಕೇಳಿರುವಂತೆ ಭಾಸವಾಯಿತು. ಆತನ ಪಾದದ್ವಯವನ್ನು ನೋಡಿದೆ. ತಕ ಧಿಂ ಮೂಲಕ ಬ್ರಹ್ಮದೇಶದಿಂದ ಬಂದ ಪಾದಗಳೇ ! ಬಂಗಾಳದ ಬರಗಾಲದಿಂದ ಬಳಲಿದ ಪಾದಗಳೇ ! ಸುಳ್ಳು ಜೀವನದ ಮುಳ್ಳು ಹಾದಿಯನ್ನು ತುಳಿದು ಕಲ್ಲಾದ ಕಾಲುಗಳು !........

ಛೆ ! ಒಬ್ಬ ಮನುಷ್ಯ, ನೋಡಿದರೆ ಒಳ್ಳೆ ಸ್ಫುರದ್ರೂಪಿ, ಎಸ್ಸೆಸ್ಸೆಲ್‌ಸಿ ಆದರೂ ದಾಟಿರುವ ಕನ್ನಡಿಗ. ಹೀಗೆ ಮೂರು ಸಲ ನನ್ನ ಮನೆಗೆ ನುಗ್ಗಿ ಮೂರು ಪುರಾಣ ನೆಯ್ದು, ಇಷ್ಟು ಸ್ವಾರಸ್ಯವಾಗಿ, ಅಭಿನಯಪೂರಿತವಾಗಿ ಗೋಳು ಹೇಳಬೇಕಾದರೆ, ಆತನು ಬಡತನದಿಂದ ನಿಜವಾಗಿಯೂ ಬಂಗಾಲಾಗಿರಬೇಕು, ಎಂದು ನಿಶ್ಚಯಿಸಿದೆ. ನನಗೆ ಆತನ ಮೇಲೆ ಇದ್ದ ಕೋಪ ಉಡುಗಿತು. ಒಳಗೆ ಹೋಗಿ, ಎರಡು ರೂಪಾಯಿ ತೆಗೆದು ತಂದು, ಅವನ ಕೈಲಿಟ್ಟೆ—ಕನ್ನಡದಲ್ಲೇ "ತಮ್ಮ ಬಡತನ ದೊಡ್ಡದು; ನಾನು ಅದನ್ನು ಪರಿಹರಿಸುವಷ್ಟು ಶಕ್ತನಲ್ಲ ! ಆದರೂ, ತಿಂಗಳಿಗೊಮ್ಮೆ ಹೀಗೆ ಬನ್ನಿ, ಏನಾದರೂ ಕೊಡುತ್ತೇನೆ. ನೀವು ಸನ್ನಿವೇಶಕ್ಕೆ ತಕ್ಕಹಾಗೆ ಕಥೆ ಚೆನ್ನಾಗಿ ಕಟ್ಟುತ್ತೀರಿ. ಇನ್ನು ಮೇಲೆ ಕನ್ನಡದಲ್ಲೇ ಹೇಳಿ... ...ಸಾಧ್ಯವಾದ ಮಟ್ಟಿಗೆ. ನಾನೂ ಕತೆಗಾರ ....ಆ ವಿಶ್ವಾಸಕ್ಕೆ ಇಕೊ" ಎಂದು ಹೇಳಿದೆ ....

—ನಾ. ಕ.

——o——

ನವೀನ ಗಾದೆಗಳು

"ಬಾಪುವಿನ—ಬಿಡುಗಡೆ"

"ಬಾಪು ಹೊರಕ್ಕೆ ಬಂದರೂ, ಅಮೆರಿ ಮೀಸೆ ಮಣ್ಣಾಗಲಿಲ್ಲ"

✤ ✤ ✤

ವೈಸ್‌ರಾಯಗೆ ರಾಜ್ಯ ದೊರೆತರೂ, ರಾಗೀ ಸಿಗೋದು ಕಷ್ಟವಾಯ್ತು.

✤ ✤ ✤

ಜುಹು ಜುಹು ಎನ್ನುವ ರೈಲು ಕೂಡ, ಜುಹು ಜುಹು ಎನ್ನುತ್ತಿದೆ.

✤ ✤ ✤

ಆಗಾ ಖಾನರ ಅರಮನೆಯು, ಈಗ ತಾನೇ ಬಿಡುಮನೆಯಾಯ್ತು.

✤ ✤ ✤

ಎದೇನ ಎಕ್ಸರೇಲಿ ನೋಡಿದರೆ, ಎರಡೇ ಮಾತು ಕಂಡಿದ್ದು 'ಜಯ ಭಾರತ'

✤ ✤ ✤

ಜೈಲಿನಿಂದ ಜಯಭೇರಿ ಹೊಡೆದುಕೊಂಡು ಬಂದರೆ, ಜಿನ್ನಾರವರಿಗೆ ನಾಲಿಗೆಯೇ ನಿಂತಿತು.

✤ ✤ ✤

ಏನು ಡಾಕ್ಟರೇ ತಾರಾಟ ಎಂದರೆ,—ಬಾಪು ಗುಡಿಸಲಲಿ ದೇವರಾಟ ಎಂದರಂತೆ.

✤ ✤ ✤

ಬಾಪು ಹೊರಗೆ ಬಂದ ಕೂಡಲೇ, ಜಪಾನದ ಬೇಕಿಸ್ಥಾನವೂ ನಿಂತು ಹೋಯ್ತು.

✤ ✤ ✤

ಶೆಟ್ಟಿ ಇಟ್ಟಲ್ಲೇ ಪಟ್ಟಣ.—ಬನಿಯಾ ನಿಂತಲ್ಲೇ ರಾಜಧಾನಿ.

✤ ✤ ✤

ಕೆಮ್ಮಿದರೆ ಕೆಳಗೆ ಬೀಳುವ ಸಾಮ್ರಾಜ್ಯ,—ಒಟ್ಟಿಗೆ ಗುಮ್ಮಿದರೆ ನಿಂತೀತೇ?

———o———

ಅಡಿಗೆ ಹೆಂಗಸು

ಅವರನ್ನು ಕೇಳಿದರೆ ಅವರು ನನಗೆ ಅಡಿಗೆ ಬರುವುದಿಲ್ಲವೆಂದೇ ಹೇಳುತ್ತಾರೆ. ಕೇಳಬೇಕಾಗಿಯೇ ಇಲ್ಲ; ನಮ್ಮ ಮನೆಗೆ ಬಂದರೆ ಸಾಕು, ಪುರಾಣ ಪ್ರಾರಂಭಿಸಿಬಿಡುತ್ತಾರೆ. ಇವಳು ಶ್ರೀಮಂತರ ಮನೆ ಹುಡುಗಿ, ಎಳನೀರಲ್ಲೇ ಮುಖ ತೊಳೆದವಳು, ಹಾಲಲ್ಲೇ ಸ್ನಾನಮಾಡಿದವಳು; ಇವಳ ಅಡಿಗೆ ತಿನ್ನುವುದಕ್ಕೆ ಆ ವಿಷಕಂಠನೇ ಬರಬೇಕು—ಎಂದೆಲ್ಲ ಪ್ರಾರಂಭಿಸಿಬಿಡುತ್ತಾರೆ. ಬಡಿಸುತ್ತಾ ಇದ್ದರೆ, ಎಲೆ ಮುಂದೆ ಬಿದ್ದು ನಗುತ್ತಾರೆ. ಸಾಂಬಾರು, ಪಲ್ಯ ಇತ್ಯಾದಿಗಳನ್ನು ಹೋಟೆಲಿಂದ ತರಿಸಿ ನನಗೆ ಅವಮಾನ ಮಾಡುತ್ತಾರೆ. ದಿನಬೆಳಗಾದರೆ, ಕಾಫಿ ಚೆನ್ನಿಲ್ಲ, ಸಾರು ಸೀದುಹೋಯಿತು, ಮಜ್ಜಿಗೆಯಲ್ಲಿ ಕಲ್ಲು, ಕೋಸುಂಬರಿ ಆರಿಹೋಯ್ತು—ಅಂತ ಜಗಳಕ್ಕೆ ಬರುತ್ತಾರೆ........ಬರುಬರುತ್ತಾ ಕಲಹದ ಕಾವು ಜಾಸ್ತಿ ಆಯಿತು. ಮೊನ್ನೆ ಕೈಯೆತ್ತಿ ಹೊಡೆಯುವುದಕ್ಕೇನೆ ಬಂದರು.

ಪಕ್ಕದ ಮನೆ ಪಾರ್ವತಮ್ಮನಿಗೆ ಹೇಳಿ, ಅಡಿಗೆಗೆ ಯಾರಾದರೊಬ್ಬರನ್ನು ಗೊತ್ತುಮಾಡಿ, ಅವಳ ಸಂಬಳಕ್ಕೆ ತವರುಮನೆಯಿಂದ ಹತ್ತು ರೂಪಾಯಿ ತರಿಸುವುದೆಂದು ತೀರ್ಮಾನಿಸಿದೆ. ಪಾರ್ವತಮ್ಮನವರು ಬಹಳ ಒಳ್ಳೆಯವರು. ಬೆಳಗ್ಗೆ ಆ ಹೆಂಗಸನ್ನು ಕಳುಹಿಸಿಕೊಟ್ಟರು.

ನಾನು ಕನ್ನಡಿ ಮುಂದೆ ನಿಂತು ಮುಖ ಸರಿಮಾಡಿಕೊಂಡು, ಹಣೆಗೆ ಕಾಸಗಲದ ಕುಂಕುಮದ ಬೊಟ್ಟಿಟ್ಟುಕೊಂಡು, ಆಕೆಯನ್ನ ಒಳಕ್ಕೆ ಕರೆದೆ. ಪಾರ್ವತಮ್ಮನವರು ಹೇಳಿದ್ದರು: "ನಿಮ್ಮ ನಾಜೋಕು, ನಿಮ್ಮ ನಾಗರಿಕತೆ ಆಕೆಗೆ ಸರಿಬೀಳುತ್ತೋ ಏನೋ? ಹುಷಾರಾಗಿರಿ" ಅಂತ.

"ಬನ್ನಿ" ಎಂದು ಒಳಕ್ಕೆ ಕರೆಸಿ ಅರೆಬಿರಿದ ಮುಗುಳು ನಗೆಯನ್ನು ಅವಳ ಕಡೆ ಬೀರಿ, ಮೂಲೆಯಲ್ಲಿದ್ದ ಮುಂದಲಿಗೆಯನ್ನು ನೆಲದ ಮೇಲೆ ಹಾಸಿ, "ಸೆಖೆ" ಎಂದು ಹೇಳುತ್ತಾ, ಎಲೆಕ್ಟ್ರಿಕ್ ಫ್ಯಾನ್ ಹಾಕಿ, "ಕೂತುಕೊಳ್ಳಿ!" ಎಂದೆ. ಇವರ ತಾಯಿಯವರನ್ನೂ ಕೂಡ ನಾನೆಂದೂ ಇಷ್ಟು ಮರ್ಯಾದೆಯಾಗಿ ಮಾತನಾಡಿಸಿರಲಿಲ್ಲ.

"ಅಡಿಗೆಯವರು ಬೇಕೇನು.......ನಿಮಗೆ?' ಎಂದು ದಡಬಡಿಸಿದಳು, ಆಕೆ.

"ಹೌದಮ್ಮಾ!" ಎಂದು ಅಂಗಲಾಚಿದೆ. ಬಹುವಿನಯದಿಂದ ಅವಳ ಉತ್ತರಕ್ಕಾಗಿ ಕತ್ತುನೀಡಿ ಕಾದುಕುಳಿತೆ. "ನಿಮ್ಮ ಮನಸ್ಸು ನನ್ನನ್ನೊಪ್ಪಿತೆ?" ಎಂಬ ಮೂಕ ಪ್ರಶ್ನೆ ನನ್ನ ಮುಖವೆಲ್ಲ ಲಿಖಿತವಾಗಿತ್ತು. "ನನ್ನ ಬೊಟ್ಟಿಗೆ ಅಗಲ ಸಾಲದೆ? ಸೊಟ್ಟ ಬೈತಲೆ ಇಲ್ಲದಿರುವುದನ್ನು ನೀವು ಗಮನಿಸಿದಿರಾ?" ಎಂದು ನಾನು ಕೇಳುವುದರಲ್ಲಿದ್ದೆ. ಆದರೆ, ನನ್ನ ಮುಖಭಾವವೇ ಸಾಕಾಗಿತ್ತು.

"ಅಡಿಗೆಯವರ ಸಹಾಯಕ್ಕೆ ನಿಮ್ಮ ಮನೆಯಲ್ಲಿ ಚಿಕ್ಕಹುಡುಗಿಯರೋ ಹುಡುಗರೋ ಇಲ್ಲವೇನು?"

"ಇಲ್ಲವಲ್ಲಮ್ಮ! ನಾವಿಬ್ಬರೇ, ಇರುವುದಲ್ಲ—ಸದ್ಯಕ್ಕೆ"

"ಮುಸುರೆ ತಿಕ್ಕುವುದಕ್ಕೆ, ಮೊಸರು ಕಡಿಯುವುದಕ್ಕೆ, ತರ್ಕಾರಿ ಹೆಚ್ಚುವುದಕ್ಕಾಗಿ!"

"ಯಾರನ್ನಾದರೂ ಗೊತ್ತುಮಾಡುತ್ತೇನೆ.......ಬೇಕಾದರೆ,"

"ಬೇಕು ಬೇಡ ಅನ್ನೋ ಮಾತು ಯಾಕೆ, ಈಗ? ಸದ್ಯಕ್ಕೆ ಈ ಮನೆಯಲ್ಲಿ ಯಾರೂ ಇಲ್ಲ?"

"ಇಲ್ಲ."

"ನನ್ನ ಸೀರೆ ನಾನೇ ಒಗೆದುಕೊಳ್ಳಬೇಕು?"

"ನಾನೇ ನನ್ನ ಸೀರೆ ಒಗೆದು ಹಾಕುತ್ತಿದೇನೆ,....... ಅಂಥಾದ್ದರಲ್ಲಿ......."

"ಅದಲ್ಲ ನಾನು ಕೇಳಿದ್ದು....ನನ್ನ ಸೀರೆ ಒಗೆಯುವುದಕ್ಕೆ ಇಲ್ಲಿ ಯಾರಾದರೂ ಉಂಟೆ, ಇಲ್ಲವೆ?"

"ಇಲ್ಲ, ಅಮ್ಮ! ಅವರವರ ಸೀರೇನ ಅವರವರೇ... ...."

"ಇದ್ದಿಲೊಲೇನೋ, ಕಟ್ಟಿಗೇದೋ........?"

"ನಿಮಗೆ ಯಾವುದು ರೂಢಿಯೋ ಅದೇ ಆಯಿತು........"

"ಹಾಗಲ್ಲ! ಇಲ್ಲಿ ಈಗ ಹಾಲಿ ಉಪಯೋಗದಲ್ಲಿರುವುದು ಯಾವುದು?"

"ಸೌದೇನೆ ಉರಿಸುವುದು, ನಾವು!"

"ಈಗೋಡೆ ಮೇಲೇನೇ ಇಷ್ಟೊಂದು ಹೊಗೆ ಕೂತಿರುವಾಗ, ಹಸಿ ಸೌದೆಯೋ ಒಣಗಿದ್ದೋ ಅಂತ ಕೇಳಬೇಕಾಗಿಯೇ ಇಲ್ಲ......"

ನನಗೆ ಭಯವಾಯಿತು. ನಮ್ಮ ಸಂಸಾರ ಸುಖವೇ ಹಾಳಾಗುವ ಸೂಚನೆ ಕಂಡುಬಂತು. ಬೊಟ್ಟಿಗೂ ಬೈಗಳಿಗೂ ಬೆದರದವಳು ಹೊಗೆಗೆ ಹೆದರಿ ಮನೆ ಬಿಟ್ಟು ಹೊರಡುತ್ತಾಳಲ್ಲಾ, ಎಂದು ಮನನೊಂದೆ.

"ನಿಮ್ಮಲ್ಲಿ ಊಟ ಬೇಗನೆಯೋ, ತಡವೋ?" ಎಂದಳು. "ಬೇಗನೇನೆ" ಅಂತ ಹೇಳಬೇಕು ಅಂತಿದ್ದವಳು, ಅವಳನ್ನೊಲಿಸುವ ಆಸೆಯಿಂದ, "ತಡ........ ತಡವೇ" ಅಂದೆ. ಹಾಗಾದರೆ, ಬೇರೆ ಯಾರನ್ನಾದರೂ ಗೊತ್ತುಮಾಡಿಕೊಳ್ಳಿ ಅಂತ ಆಕೆ ಎದ್ದಳು.

—ಶ್ರೀ ರುದ್ರಮ್ಮ.

———o———

ಕನಸಿನಾಶೆ

ಬೇಸಿಗೆ ಕಾಲ. ಬೆಳದಿಂಗಳು ಮನೆಯ ಒಳಗಿದ್ದರೆ ಧಗೆ. ಈ ಯುದ್ಧದ ಗಲಾಟೆ. ಮಳೆಯೂ ಕಾಲಕ್ಕೆ ಸರಿಯಾಗಿ ಬರಲೊಲ್ಲದು. ಮನೆ ಒಳಗಿನ ಶಕೆ ತಡೆಯಲಾರದೆ ಹೊರಕ್ಕೆ ಊಟವಾದ ಮೇಲೆ ಬಂದು ಕುಳಿತು, ಹಾಗೆಯೇ ಹೆಂಡತಿಯೊಡನೆ ಆ ಮಾತು ಈ ಮಾತು ಆಡುತ್ತಾ ಕುಳಿತೆ. ನಾವು ಮೊದಲು ಪಟ್ಟ ಕಷ್ಟ, ಆ ಮೇಲೆ ಬಂದ ಕಷ್ಟ—ಈಗ ಬಂದಿರುವ ಕಷ್ಟ ಇವನ್ನೇ ಮಾತನಾಡುತ್ತಿದ್ದೆವು—ಮೊದ ಮೊದಲಲ್ಲಿ ನಮ್ಮ ತಾಯಿ ಇದ್ದಾಗ ಸೊಸೆಗಿದ್ದ ಆತಂಕ ಕಟ್ಟು ಇತ್ಯಾದಿ—ಅನಂತರ ಇವಳೇ ಮನೆ ಯಜಮಾನಿಯಾದಾಗ ಮಕ್ಕಳು, ಮರಿ, ರಾತ್ರಿ ಹಗಲು ಅಳುವುದು, ಕರಿಯುವುದೂ—ಈಗ ಹೊಟ್ಟೆಗಾದರೆ ಬಟ್ಟೆಗಿಲ್ಲ—ಬಟ್ಟೆಗಾದರೆ ಹೊಟ್ಟೆಗಿಲ್ಲ. ಎರಡಕ್ಕೂ ಆದರೆ ಮರೆಯುವುದಕ್ಕಿಲ್ಲ—ಹೀಗೆ ಮಾತು ಬೆಳೆಯಿತು. "ಇದರಲ್ಲೆಲ್ಲಾ ನೋಡಿ ಅಂದರೆ, ಮೊದಲೇ ಚೆನ್ನಾಗಿತ್ತು. ಅತ್ತೆ ಅಂಕೆ ಇದ್ದರೂ, ಬೆಂಕಿ ಮುಂದೆ ಬೇಯೋ ಗೋಜಿತ್ತಿಲ್ಲ—ಮಕ್ಕಳನ್ನು ಸುಧಾರಿಸುವ ಕಷ್ಟವಿತ್ತಿಲ್ಲ. ಖಾಯಿಲೆ ಕಸಾಲೆ ಎಂದು ಹೆದರಬೇಕಾಗಿತ್ತಿಲ್ಲ. ಎಲ್ಲಾದಕ್ಕೂ ದೊಡ್ಡವರಿದ್ದು ನೋಡಿಕೊಳ್ಳುತ್ತಿದ್ದರು. ರೇಗಿದಾಗ ಒಂದಿಷ್ಟು ಅನ್ನುತ್ತಿದ್ದರು. ಆದರೆ ಅದೇ ಸುಖವಾದ ಕಾಲ ಅಂದ್ರೆ."

ಹಾಗೆಯೇ ಆ ಮಾತು ಈ ಮಾತು ಆಡಿ ಹನ್ನೆರಡು ಗಂಟೆ ಹೊತ್ತಿಗೆ ಒಳಕ್ಕೆ ಹೋಗಿ ಮಲಗಿಕೊಂಡಳು. ಇನ್ನೂ ಶಕೆ. ಸೊಳ್ಳೆ ಕಾಟ. ಹೀಗಾಗಿ ನಾನು ಮಲಗಿದರೆ ಹೇಗೂ ನಿದ್ರೆ ಬರುವುದಿಲ್ಲ. ಏನಾದರೂ ಓದಿಯೇ ಬಿಡೋಣ ಎಂದು ಒಂದು ಹಳೇ ಪುಸ್ತಕವನ್ನು ತೆಗೆದು ಓದಲಾರಂಭಿಸಿದೆ. ಹಾಗೆಯೇ ನಿದ್ರೆ ಬಂತು.

ಹಠಾತ್ತನೆ ಎಚ್ಚರವಾಯ್ತು. ಎದ್ದು ನೋಡುತ್ತೇನೆ, ಯಾರೋ ಗಟ್ಟಿಯಾಗಿ ಬಿಕ್ಕಿ ಬಿಕ್ಕಿ ಅತ್ತಂತೆ ಶಬ್ದ. ಇದೇನಿದು ಎಂದು ಕುಳಿತು ನೋಡಿದರೆ, ಈಕೆ ಅಲ್ಲೇ ಗೋಳೋ ಎಂದು ಅಳುತ್ತಿದ್ದಾಳೆ. ಇದು ಯಾಕೆ ಹೀಗೆ ಅಳುತ್ತಿದ್ದಾಳೆ? ನಾನೇನಾದರೂ ಹೋಗಿಬಿಟ್ಟಿದ್ದೀನೋ ಎಂದು ಚಿಗುಟಿ ನೋಡಿಕೊಂಡೆ; ನೋವಾಯಿತು. ಅರೆ! ನಾನು ಬದುಕೇ ಇದ್ದೇನೆ. ಇನ್ನೂ ಯಾಕೆ ಹೀಗೆ ಅಳುತ್ತಾಳೆ. ಅವಳ ಕನಸಿನಲ್ಲಾದರೂ ಹೋಗಿಬಿಟ್ಟೆನೋ ಎಂದು ಮೆಲ್ಲಗೆ ಎಬ್ಬಿಸಿದೆ.

'ಎಚ್ಚೆತ್ತಳು'

'ಯಾಕೆ ಹಾಗೆ ಅಳುತ್ತಿದ್ದೆ?'

'ಯಾರು ಅತ್ತಿದ್ದು?'

'ಕಣ್ಣೆಲ್ಲಾ ನೀರಾಗಿದೆ. ದಿಂಡೆಲ್ಲಾ ಒದ್ದೆಯಾಗಿದೆ'

'ಹೌದು ಅಂದ್ರೆ, ಅಯ್ಯೋ ಕನಸು ಅಂದ್ರೆ'

‘ ಏನಾಯ್ತು ಕನಸ್ಸಿನಲ್ಲಿ ನಾನೇನಾದರೂ.... ’

‘ ಛೀ ಹಾಗೆಲ್ಲಾ ಅನ್ನಬೇಡಿ ’

‘ ಮತ್ತು ಇನ್ನು ಯಾಕೆ ಅತ್ತಿದ್ದು ? ’

ನನಗೋ ಕುತೂಹಲ ಇಷ್ಟು ಗಟ್ಟಿಯಾಗಿ ಅಳಬೇಕಾದರೆ ಏನೋ ಮಹತ್ತರ ಕಷ್ಟ ಬಂದಿರಬೇಕು. ನಾನು ಸತ್ತಮೇಲೆ ಆಗುವುದನ್ನು ನೋಡುವುದಕ್ಕೆ ನನ ಗಾಗುವುದಿಲ್ಲ.

ಈ ಅನಿರೀಕ್ಷಿತ ಸಂದರ್ಭ ಒದಗಿರುವಾಗ ಇದನ್ನು ಪೂರ್ತಿ ವಿಚಾರಿಸಲೇ ಬೇಕು. ಅಥವಾ ನಾನು ಸಾಯುವುದಕ್ಕಿಂತಲೂ ಹೆಚ್ಚು ದುಃಖಕರವಾದ ಪ್ರಸಂಗ ಗಳು ಇನ್ನೇನಾದರೂ ಇವೆಯೋ ಎಂಬ ಅನುಮಾನ ಬೇರೆ.

‘ ಏನೋ ಕನಸು ಅಂದರೆ. ಅದನ್ನು ಕಟ್ಟಿಕೊಂಡು ಏನು ಈಗ ? ’

‘ ಹಾಗಲ್ಲ ಕಣೆ. ಕನಸ್ಸುಗಳಿಂದ ಮುಂದೆ ಏನೇನಾಗುತ್ತೆ ಎಂದು ತಿಳಿದು ಕೊಳ್ಳಬಹುದು. ಮಹಾಮಹಾ ಯುದ್ಧಮಾಡುವವರೂ ಕೂಡ ಮುಂದೇನು ಮಾಡಬೇಕೆಂಬುದನ್ನು ಕನಸ್ಸಿನಲ್ಲಿ ಕಂಡೇ ಕಾರ್ಯತಃ ಮಾಡಲೆತ್ನಿಸುತ್ತಾರೆ. ನಿನ್ನ ಕನಸ್ಸನ್ನು ಜ್ಞಾಪಿಸಿಕೊ ಆದರಿಂದ ಭವಿಷ್ಯ ತಿಳಿದೇ ತಿಳಿಯುತ್ತೆ....

ಏನೂ ಸಂಕೋಚಪಡದೆ ಏನಾಯಿತು ಹೇಳು.’

‘ ಏನೂ ಇಲ್ಲಾ ಅಂದ್ರೆ ’

‘ ನಿನ್ನತಲೆ, ಹೇಳು ಅಂದರೆ ಹೇಳಬೇಕು. ಹಿತವಾಗಲಿ ಅಹಿತವಾಗಲಿ ಕೇಳುವುದಕ್ಕೆ ಸಿದ್ಧ. ಸುಮ್ಮನೆ ರೇಗಸ್ಬೇಯೋ ’

ನನಗೂ ಸ್ವಲ್ಪ ಕೋಪ. ಬೇಜಾರು

‘ ಇಲ್ಲಾ ಅಂದ್ರೆ, ನಿಮ್ಮನ್ನು ಯುದ್ಧಕ್ಕೆ ಕೆಲಸಕ್ಕೆ ಕರೆದಿದ್ರು ಕನಸಿನಲ್ಲಿ, ನಾನ್ನೂರು ರೂಪಾಯಿ ಸಂಬಳಕ್ಕೆ ನೀವು ಮಕ್ಕಳು ಮರಿ ಇದ್ದಾರೆ ಹೆಂಡತಿ ಇದ್ದಾಳೆ ನಾನು ಹೋಗುಲ್ಲಪ್ಪಾ ಎಂದು ಬಿಟ್ರಿ. ಇಷ್ಟಕ್ಕೂ ಯಾರ ಯುದ್ಧಕ್ಕೆ ಯಾರು ತಲೆಗೊಡಬೇಕು ಎಂದು ಬಿಟ್ರಿ, ಆಗ ನಾನು ‘ಹಾಗಲ್ಲ ಅಂದ್ರೆ ಯುದ್ಧಕ್ಕೆ ಸೇರಿದರೆ ಈಗ ವರ್ಷಕ್ಕೆ ಸಂಪಾದಿಸಿದ ಸಂಬಳ ತಿಂಗಳಿಗೆ ಸಂಪಾದಿಸಬಹುದು, ಈ ದರಿದ್ರವೆಲ್ಲಾ ಮೂರು ತಿಂಗಳಿಗೇ ಮುಕ್ತಾಯ. ಮಸಲ ಏನಾದರೂ ಹೆಚ್ಚು ಕಡಿಮೆಯಾದರೂ ಮಕ್ಕಳಿಗೆಲ್ಲಾ ಹಣ ಕೊಡುತ್ತಾರಂತೆ ’ ಹೀಗೆಲ್ಲಾ ನಿಮಗೆ ಭೋದನೆಮಾಡುತ್ತಿದ್ದೆ. ನೀವು ಆಗುವುದೇ ಇಲ್ಲ ಅಂತ ಹಠಹಿಡಿದಿರಿ. ಅದ ಕ್ಕೋಸ್ಕರ ಅತ್ತೆ. ಎಲ್ಲಾ ಕನಸೂ ಅಂದ್ರೆ—

ಒಳ್ಳೇ ಕನಸು ಬಿದ್ದಳಲ್ಲಪ್ಪಾ- ಇವಳು ಹೇಳಿದ್ದೆಲ್ಲಾ ಅವಳ ಮನಸ್ಸಿನಲ್ಲಿತ್ತೇ- ಎಲ್ಲಾ ಅವಳ ಕನಸೇ- ಕನಸು ನೆನಸಾದರೆ ಆಕೆಗೆ ಸುಖವೇ. ದೇವರೇ ಬಲ್ಲ.

"ಡಿಲಕ್ಸ್ ಕ್ವೀನ್"

[ತಾವು ಸಿಗರೇಟಾಧ್ಯಾಪಕರಲ್ಲದಿದ್ದರೆ ದಯವಿಟ್ಟು ಮುಂದಿನ ಪೇಜು ತಿರುಗಿಸಿಬಿಡಿ. ಇಷ್ಟರ ಮೇಲೆ ನಿಮ್ಮಿಷ್ಟ. ಬೇಕಾದರೆ ಓದಿ. ಆ ಮೇಲೆ ನನ್ನನ್ನ ಮಾತ್ರ ಬೈದುಕೋ ಬೇಡಿ.]

ಸೀನಪ್ಪನಿಗೆ ಸಿಗರೇಟು ಸೇದುವ "ಖಾಯಿಷ್ಟು" ಇತ್ತು. ಆದರೆ ಸೇದುವು ದಕ್ಕೆ ಮಾತ್ರ ಬರದು. ಸೇದುವ ತುದಿಯನ್ನ ಎಂಜಲು ಮಾಡದೆ ಸೇದಲು ಕೂಡ ಬರದು. ಆದರೂ ದಿನವೊಂದಕ್ಕೆ ಹತ್ತು ಇಪ್ಪತ್ತು ಸಿಗರೇಟು ಸೇದುತ್ತಿದ್ದ. ಎಂಟು ಆಣೆ ಪ್ರತಿದಿನ ಅದಕ್ಕೆ ಖರ್ಚುಮಾಡುತ್ತಿದ್ದ (ಈ ಅಂಕಿಗಳಿಗೂ, ಅವನಿಗೆ ಈಚೆಗೆ ಮದುವೆಯಾಯಿತು ಅನ್ನುವ ವಿಷಯಕ್ಕೂ ಏನೇನೂ ಸಂಬಂಧವಿಲ್ಲ). ಮೊನ್ನೆ ಸೀನಪ್ಪ ನನ್ನ ರೂಮಿಗೆ ಇಳಿದ. ಇಳಿದವನೇ ಬಾಯಲ್ಲಿದ್ದ ಸಿಗರೇಟನ್ನ ಹೆಬ್ಬೆಟ್ಟು ಕಿರುಬೆಟ್ಟುಗಳ ನಡುವೆ ಸಿಕ್ಕಿಸಿ ತೆಗೆದು, ಮೇಲಕ್ಕೆ ಹೊಗೆ ಬಿಟ್ಟು, ಸಿಗರೇಟಿನ ಒದ್ದೆಯಾದ ತುದಿಯನ್ನ ತೇಲುಗಣ್ಣಿಂದ ನೋಡುತ್ತಾ,

"ಈ ಸಿಗರೇಟನ್ನ ಸೇದಿದ್ದೀಯಾ?" ಅಂದ.

ನನ್ನ ಹತ್ತಿರ ಈ ಪ್ರಶ್ನೆ! 'ಖಾಕಿ ಸಿಗರೇಟಿಂ'ದ ಹಿಡಿದು 'ಕರೋನಾ' ಸಿಗಾರ್ ವರೆಗಿನ ಎಲ್ಲಾ ವೇಷದ ಸೊಪ್ಪನ್ನೂ ಹೊಗೆಯಾಡಿಸಿದ್ದ ನನಗೆ!! ಅದರ ವಾಸನೆಯಿಂದಲೇ ಅದು 'ವಿಲ್ಸ್ ನೇವಿಕಟ್' ಅಂದೆ. ಸೀನಪ್ಪ ಸಿಗರೇಟು ತೆಗೆದುಕೊಟ್ಟ. ಹತ್ತಿಸಿ ಸೀನಪ್ಪನ ಸಿಗರೇಟು ಮುಗಿಯುವವರೆಗೆ ಸುಮ್ಮನಿದ್ದು,

"ಸೀನಪ್ಪ, ಈ ಸಿಗರೇಟು ನೋಡಿದ್ದೀಯಾ?" ಅಂದೆ.

"ಯಾವುದು? ಚೆನ್ನಾಗಿದೆಯೇ?" ಅಂದ.

"ಸೇದಿ ನೋಡು, ಒಂದೇ ಒಂದಿದೆ. 'ಡಿಲಕ್ಸ್ ಕ್ವೀನ್' ಅಂತ. ಕಾರ್ಲಿ ಜೇಮ್ಸ್ಟರ್ ಕಂಪನೀದು" ಅಂದೆ.

"ಹೌದೇ!" ಅನ್ನುತ್ತಲೂ ಕಣ್ಣು ಊರಗಲ ಮಾಡಿ ಸೀನಪ್ಪ ನಾನು ಡ್ರಾಯರಿಂದ ತೆಗೆದುಕೊಟ್ಟ ಸಿಗರೇಟನ್ನ ನನ್ನ ಸಿಗರೇಟಿನ ತುದಿಯ ಬೆಂಕಿಯಿಂದ 'ಉಫ್ ಉಫ್' ಅನ್ನುತ್ತ ಹೊತ್ತಿಸಿಕೊಂಡ. ನಾನು ಹೊಗೆಯನ್ನು ಮೂಗಿನಿಂದ ಹೊರಗೆ ಬಿಟ್ಟು, ಸೀನಪ್ಪನ ಕಡೆ ನೋಡಿದೆ. ಒಂದು ಸಲ ಹೊಗೆ ಎಳೆದು ಕಣ್ಣು ಮುಚ್ಚಿಕೊಂಡು ಬಾಯಿನೊಳಗಿದ್ದ ಹೊಗೆಯನ್ನೇ ಹೇಗೋ ಮೂಸಿನೋಡಿದವ ನಂತೆ, ಮಾಡಿ ಸೀನಪ್ಪ

"ಜೋರಾಗಿದೆಯಲ್ಲೋ!" ಅಂದ.

" ಡಿಲಕ್ಸ್ ಕ್ವೀನ್ " ಅಂದೆ.

" ಫಸ್ಟ್‌ಕ್ಲಾಸ್ ಫ್ಲೇವರು " ಅಂದ.

" ಜಾನ್ ಕಾರ್ಲ್ ಜೇವರ್‍ಸ್ಟರ್ ಕಂಪೆನೀದು " ಅಂದೆ.

" ಗೋಲ್ಡ್‌ಫ್ಲೇಕ್ ಯಾಕೆ? " ಅಂದ ಸೀನಪ್ಪ, ಇನ್ನೊಮ್ಮೆ ಹೊಗೆ ಎಳೆದುಕೊಂಡು.

" ಕಂಟೋನ್ಮೆಂಟಿನಲ್ಲಿ ತಗೊಂಡಿದ್ದು " ಅಂದೆ.

" ಅಹಾ ! " ಅಂದ ಸೀನಪ್ಪ.

ರೂಮಿಗೆ ಬೀಗ ಹಾಕಿಕೊಂಡು ಇಬ್ಬರೂ ಕಾಫಿಗೆಂತ ಹೋಟಲಿನ ಕಡೆ ಹೊರಟೆವು. ಸೀನಪ್ಪ ದೋಸೆ ತಿನ್ನುತ್ತ,

" ಸಾಯಂಕಾಲ ಬರ್‍ತೀಯಾ, ಪೌತ್‌ಪೆರೇಡಿಗೆ. ಹಾಗೇ ಆ ಡಿಲಕ್ಸ್ ಕ್ವೀನ್ನ ಒಂದು ೨೦-೨೫ ಪ್ಯಾಕೆಟ್ ತರೋಣ " ಅಂದ.

" ಅಲ್ಲಿಗ್ಯಾಕೆ, ಇದಕ್ಕೆ ? ಇಲ್ಲೇ ಸಿಗುತ್ತೆ " ಅಂದೆ.

" ಆ ! " ಸೀನಪ್ಪನಿಗೆ ಆಶ್ಚರ್ಯ. ಈ ಬ್ರ್ಯಾಂಡು ಸಿಟೀಲೇ ಸಿಗುತ್ತದೆಯೆ ಅಂತ; " ಎಲ್ಲಿ ? " ಅಂದ.

" ಇಲ್ಲೇ. ಹೇಳ್ತೀನೆ ಬಾ. "

" ಎಷ್ಟು ? "

" ಆರು ಕಾಸಿಗೆ ಹತ್ತು ಸಿಗರೇಟು. ಅಗ್ಗ ಅಲ್ವೆ ? "

ಗಂಟಲಲ್ಲಿ ಸಿಕ್ಕಿಕೊಂಡ ದೋಸೆಯನ್ನ ನೀರಿನ ಸಹಾಯದಿಂದ ಗುಳಕ್ಕೆಂತ ನುಂಗಿ, ಸೀನಪ್ಪ,

" ಇಷ್ಟೇನೇ ! ಅಯ್ಯೊ !! " ಪಾಂಚ್‌ಮಿನಾರ್ " ಬ್ರ್ಯಾಂಡ್ಗಿಂತ........." ಅಂದ ನಾನು ಮಾತಾಡಲಿಲ್ಲ. ಸೀನಪ್ಪನ ಮನಸ್ಸಿನಲ್ಲಿ ಆಗುತ್ತಿದ್ದ ತಳಮಳ ನನಗೆ ತಿಳಿದಿತ್ತು. ಸ್ವಲ್ಪ ಹೊತ್ತು ಬಿಟ್ಟು, ಸೀನಪ್ಪನೇ

" ಅದಕ್ಕೇ.......ಒಂದ್ಧರಾ ಇತ್ತು... ...." ಅಂದ.

ಸಂಪಾದಕರಿಗೆ—ದಯವಿಟ್ಟು ಈ ಕತೆಯನ್ನ ನನ್ನ ಹೆಸರಿನೊಡನೆ ಹಾಕಿಬಿಡಬೇಡಿ ! ನಮ್ಮಪ್ಪ ಓದಿಗೀದಿದರೆ......!! ಬೇರೆ ಏನಾದರೂ ಹೆಸರು ಹಾಕಿಬಿಡಿ, ದಮ್ಮಯ್ಯ !!!

—ಎಸ್. ಎನ್. ಶಿ.

———o———

ಮನಸ್ಸಿಗೊಪ್ಪುವ ಮನೆ

ಮೊನ್ನೆ ಯಾರೊ ಲೆಕ್ಕಾಚಾರ ಹಾಕಿ, ಬೆಂಗಳೂರಲ್ಲಿ ೧೦೦೦ ಮನೆಗಳು ಕಮ್ಮಿ ಇವೆ ಎಂದರು. ಇದು ತಪ್ಪು ಲೆಕ್ಕ. ನಿಜವಾಗಿಯೂ ೧೦೦೧ ಮನೆಗಳು ಸಾಲವು; ಏಕೆಂದರೆ, ನಾವು ಈಗ ಹುಡುಕುತ್ತಿದ್ದರೂ ಸಿಗದಿರುವ ಮನೆಯೊಂದನ್ನು ಲೆಕ್ಕಕ್ಕೆ ಸೇರಿಸಿಕೊಳ್ಳಬೇಕು.

ಮನೆ ಹುಡುಕಿಕೊಂಡು ಯಾತ್ರೆ ಹೊರಟಾಗಿನಿಂದ ನಾವು ಇಲ್ಲಿ ಅನೇಕ ಮನೆಗಳನ್ನು ನೋಡಿದ್ದೇವೆ. ಆದರೆ, ಯಾವುದೂ ಸಮಾಧಾನ ಕೊಡಲಿಲ್ಲ. ಇರುವ ಜಾಗವೋ, ಇಲ್ಲವೆ ನೋಡುವುದಕ್ಕೋ, ಅಥವಾ ಬಾಡಿಗೆಯೋ, ಅಂತು ಏನೋ ಒಂದು ಸರಿಯಾಗಿರಲಿಲ್ಲ. ಎಲ್ಲಕ್ಕಿಂತಲೂ ಹೆಚ್ಚಾಗಿ ಆ ಮನೆಗಳ ಚಿರಸ್ವತ್ತುಗಳು ಮನಸ್ಸಿಗೊಪ್ಪುತ್ತಿರಲಿಲ್ಲ. ಚಿರಸ್ವತ್ತು ಎಂದರೆ, ಅಲ್ಲಿ ಆಗಲೆ ಬೇರೂರಿ, ಕದಲುವುದಿಲ್ಲ ಎನ್ನುತ್ತಿದ್ದ ಆಸಾಮಿಗಳು. ಮನೆಗಳಿಗೂ ವಾಸಸ್ಥರಿಗೂ ಹೊಂದಾವಣೆ ಆಗದ ಮನೆಗಳು ಬೆಂಗಳೂರಿನಲ್ಲಿ ಬೇಕಾದಹಾಗಿವೆ.

ಸರೋಜ "ಅದು ಸಿಕ್ಕಿದರೆ!" ಎನ್ನಿಸುವಂಥ ಮನೆ ಎದುರಿಗೆ ನಿಂತು, "ಧೈರ್ಯವಾಗಿ ಒಳಗೆ ಹೋಗಿ ಅವರಿಗೆ ಬೇರೆ ಕಡೆ ಹೋಗಲು ಇಷ್ಟವಿಲ್ಲವೆ ಎಂದು ಕೇಳದರೊ?" ಎನ್ನುವಳು.

"ಅವರು ಬೇರೆ ಕಡೆ ಹೋಗದೆ ನಾವು ಇಲ್ಲಿ ಬರುವಂತಿಲ್ಲ ಬಂದರೆ, ಇಲ್ಲಿ ಜಾತ್ರೆಯಾಗುತ್ತೆ" ಎಂದು ನಾನು ಒಪ್ಪುತ್ತಿದ್ದೆ.

"ಸರಿ! ಇವರು ಬರುವುದಕ್ಕೆ ಮುಂಚೆ ಇಲ್ಲಿ ಯಾರೊ ಇದ್ದವರು ಹೋದರು. ಈಗ ನಾವು ಬರುವುದಕ್ಕೆ ಮುಂಚೆ ಇವರು ಏಕೆ ಹೋಗಬಾರದು?"

"To Let ಎಂದು ಬೋರ್ಡು ಹಾಕಿದ ಕೂಡಲೆ ಇವರು ಹೊರಡುತ್ತಾರೆ" ಎಂದೆ.

ಕೆಲವು ದಿನ ಆ ಮನೆಯೆದುರಿಗೆ ಸರೋಜ ಹೊಂಚು ಕಾಯುತ್ತ To Let ಬೋರ್ಡನ್ನು ತಗಲಿಸುವುದನ್ನೇ ಎದುರು ನೋಡುತ್ತಿರುತ್ತಾಳೆ. ಅದನ್ನು ಗೋಡೆಗೆ ತೂಗು ಹಾಕಿದ ಕೂಡಲೆ ತಾನು ನುಗ್ಗಿ, 'To' ಎನ್ನುವುದರ ಮೇಲೆ ಗೀಟೆಳೆದು, ಮಾಲೀಕನಿಗೆ ಆಕ್ಷಣವೆ ಒಂದು ತಿಂಗಳ ಬಾಡಿಗೆ ಮುಂಗಡವಾಗಿ ಕೊಡಬೇಕೆಂಬುದು ಅವಳ ಆಸೆ. ಒಳ್ಳೆ ಮನೆಗಳನ್ನೆಲ್ಲ ಹೀಗೇ ಇತರರು ನುಂಗಿರುವುದು ಎಂದು ಅವಳ ಅಭಿಮತ. ಆದರೆ, ಈ ಕಾಯುವ ಕೆಲಸ ಕಷ್ಟ. ಅಲ್ಲದೆ, ಕೆಲಸಬಿಟ್ಟು ನಾನು ನನ್ನ ಸರತಿ ಎಂದು ಕಾಯುವುದಕ್ಕೆ ಹೋಗಲಾರೆ.

ಕೆಲವು ಸಲ, ಏನೋ ಅನುಕೂಲವಾದ ಮನೆ ಸಿಗಬಹುದು ಎಂಬ ಆಸೆಯಿಂದ ಪತ್ರಿಕೆಗಳ ಜಾಹೀರಾತುಗಳನ್ನು ನೋಡುತ್ತೇವೆ. "ಇಗೊ! ಇಲ್ಲೊಂದಿದೆ. 'ದೊಡ್ಡ ಬಂಗಲೆ. ನಾಲ್ಕು ಗ್ಯಾರೇಜ್, ಎಂಟು ಬೆಡ್ ರೂಂ, ಲಕ್ಷಾಧೀಶ್ವರರಿಗೆ ಅನುಕೂಲ.' ಇದು ತೀರ ದೊಡ್ಡದು" ಎಂದು ಒಂದು ದಿನ ಸಂಜೆ ಓದಿ ಹೇಳಿದೆ.

"ಶತಾಧೀಶ್ವರರಿಗೆ ಸರಿಯಾದುದು ಯಾವುದೂ ಇಲ್ಲವೆ?" ಎಂದು ಕೇಳಿದಳು.

"ಇಲ್ಲಿ ಇನ್ನೊಂದಿದೆ. ಬಾಡಿಗೆ ಒಪ್ಪಿದರೆ ಸಿಕ್ಕುವುದಂತೆ."

"ಸರಿ, ನಮಗೆ ಒಪ್ಪಿದ್ದು ಅವರಿಗೆ ಒಪ್ಪುವುದಿಲ್ಲ; ಅವರಿಗೆ ಒಪ್ಪಿದ್ದು ನಮಗೆ ಒಪ್ಪುವುದಿಲ್ಲ"

ಮೂವತ್ತೈದು ರೂಪಾಯಿನದು ಬೇರೆ ಇದೆ ಒಂದು. ಅದು ಅನುಕೂಲ ವಾಗಿರಬಹುದು. ಅಂದರೆ ಬಾಡಿಗೆ ಅನುಕೂಲವಾಗಿದೆ; ಮನೆ ಇಲ್ಲದೆ ಇರಬಹುದು."

"ನಿಮಗೆ ಈಗ ಮೂವತ್ತೈದು ರೂಪಾಯಿ ಕೊಡುವುದಕ್ಕಾಗುತ್ತದೆಯೆ?"

"ಇಲ್ಲ. ಆದರೆ ನಿನ್ನದೂ ಒಂದಿಷ್ಟು ಬ್ಯಾಂಕಿನಲ್ಲಿದೆಯಲ್ಲ."

"ನೀವೆ ಏನಾದರೂ ಭೋಗ್ಯವೊ, ಆಧಾರವೊ, ಸಾಲಾನೊ ಮಾಡುವು ದಕ್ಕಾಗುವುದಿಲ್ಲವೆ?"

"ಹಾಗೆ? ಸರಿ, ನೋಡೋಣ."

ಮಲಗುವವರೆಗೂ ಭೋಗ್ಯವೊ, ಆಧಾರವೊ ಮಾಡುವುದಕ್ಕೆ ಏನಿದೆ ಎಂದೂ, ಸಾಲ ಎಲ್ಲಿ ಹೇಗೆ ಹುಟ್ಟಬಹುದೆಂದೂ ಆಲೋಚನೆ ನಡೆಸಿದ್ದಾಯಿತು.

"ಅಯ್ಯೋ, ಬಿಡೆ. ಮೂವತ್ತೈದು ರೂಪಾಯಿಗೆ ಸಿಕ್ಕಬೇಕಾದರೆ ಅದು ಗುಡಿಸಲಿರಬೇಕು" ಎಂದು ಬೆಳಗ್ಗೆ ಹೇಳಿದೆ.

"ನಮಗೆ ಯಾವ ತರದ ಮನೆ ಬೇಕು ಅಂತ ಸರಿಯಾಗಿ ವರ್ಣನೆ ಮಾಡಿ ನಾವೇ ಒಂದು ಜಾಹೀರಾತು ಕಳುಹಿಸೋದು ಒಳ್ಳೆಯದಲ್ಲವೆ? ಮೋಟಾರು, ಮದುವೆ ಬೇಕಾದೋರು ಹಾಗೇ ಮಾಡೋದು" ಎಂದಳು ಸರೋಜ.

"ಮೋಟಾರು ವರ್ಣಿಸುವುದಕ್ಕಿಂತಲೂ ಮನೆ ವರ್ಣಿಸುವುದು ಸಾವಿರಪಾಲು ಕಷ್ಟ."

"ನಿಮಗೇನು ಮಹಾ ಕಷ್ಟ. ಅಷ್ಟೊಂದು ಬರೀತೀರಿ."

ಅವಳು ಹೇಳಿದ್ದು ನಿಜ ಎಂದು ತೋರಿದುದರಿಂದ ಆಫೀಸು ರೂಮಿಗೆ ಹೋಗಿ ವರ್ಣನಾಕಾರ್ಯಕ್ಕೆ ತತ್ಪರನಾದೆ.

ಸುಮಾರು ಒಂದು ಘಂಟೆ ಕಾಲ ಜಾಹೀರಾತುದಾರರ ಅನುಕರಣ ಮಾಡಿ ಅರ್ಥಗರ್ಭಿತ ವಾಕ್ಯರಚನೆ ಮಾಡಿದೆ. ತಮಗೆ ಬೇಕಾದುದನ್ನೆಲ್ಲ ಅವರು ಮೂರು ನಾಲ್ಕು ಪಂಕ್ತಿಯಲ್ಲಿ ಹೇಳುತ್ತಾರೆ. ನಾವು ಹೇಳಬೇಕಾದುದನ್ನೆಲ್ಲ ಹತ್ತು ಹನ್ನೆರಡು ಪಂಕ್ತಿಯಲ್ಲಾದರೂ ಹೇಳಲೆತ್ನಿಸಿದೆ. ಬರೆದ ವರ್ಣನೆಯನ್ನೋದಿ, ಅಂಥ ಮನೆಯಲ್ಲಿರಲು ಸಾಧ್ಯವಿಲ್ಲ ಎಂದು ಇಬ್ಬರೂ ಒಪ್ಪಿದೆವು.

“ನೀವು ಯಾವಾಗಲೂ ಬರೆಯುವ ಹಾಗೆ ಬರೆಯಬಾರದೆ?” ಎಂದಳು ಸರೋಜ. “ಪತ್ರಿಕೆಗೆ ಕಳುಹಿಸುವ ಕಥೆಗಳಲ್ಲಿ ವರ್ಣನೆ ಮಾಡುವ ಹಾಗೆ ಮಾಡಿ.”

“ಆಗ ಬರಿ ಕಥೆ ಕಳುಹಿಸುತ್ತೀನಿ. ಈಗ ಅದರ ಜೊತೆಗೆ ದುಡ್ಡನ್ನು ಕಳುಹಿಸಬೇಕು ಅನ್ನುವುದನ್ನ ಮರೆಯಬೇಡ.”

“ನಿಮ್ಮಂಥ ಕಲೋಪಾಸಕರು ತಮ್ಮ ಕೃತಿಯಲ್ಲಿ ತಮ್ಮ ಸರ್ವ ಶಕ್ತಿಯನ್ನೂ ತುಂಬುತ್ತಿದ್ದರು ಎಂದುಕೊಂಡಿದ್ದೆ.”

ಸರಿ, ಅದಾದ ಮೇಲೆ ಕಲೋಪಾಸಕನಾದ ನನ್ನ ಅಂತರಾತ್ಮ ಎಚ್ಚರಗೊಳ್ಳಬೇಕಾಯಿತು. ಇನ್ನೊಂದು ಘಂಟೆಯಾದ ಮೇಲೆ ಅವನು ಈ ರೀತಿ ಹೊರಬಿದ್ದ—

ಬೇಕಾಗಿದೆ

ಒಂದು ಅಸಾಧಾರಣವಾದ ಮನೆ. ಮುಂದುಗಡೆ ಒಂದು ವೆರಾಂಡ, ಹಾಲ್, ೨ ಬೆಡ್ ರೂಂ, ಬೇರೆ ೨ ರೂಂ, ಊಟದ ಮನೆ, ಉಗ್ರಾಣ, ಅಡಿಗೆ ಮನೆ, ಬಚ್ಚಲು ಮನೆ, ಹಿಂದುಗಡೆ ವೆರಾಂಡ ಇವು ಇರಲೇ ಬೇಕಾದುದೆಂದು ಹೇಳಬೇಕಾಗಿಲ್ಲ. ಅಸಾಧಾರಣವಾದ ಮನೆ ಎಂದರೆ ಓಬಿರಾಯನ ಕಾಲದ ಬಿಕೋ ಎನ್ನುವ ಮನೆಯಲ್ಲ. ಮುಂದಿನ ವೆರಾಂಡ ಚಚ್ಚೌಕವಾಗಿರಬೇಕು. ಹಾಲ್ ಹಾಗಿರಬಾರದು; ಒಂದು ಕಡೆ ಸ್ವಲ್ಪ ಅದುಮಿದ ಹಾಗೆ, ಅಂಡಾಕಾರನಾಗಿರಬೇಕು. ೨ ಬೆಡ್ ರೂಂಗಳ ಪೈಕಿ, ಒಂದು ಡ್ರೆಸ್ಸಿಂಗ್ ರೂಂ ಆಗಿರಬಹುದು. ಆದರೆ, ಡ್ರೆಸ್ಸಿಂಗ್ ರೂಂ ಎಂದರೆ, ಹಿಂದೆ ಬಾಡಿಗೆಗಿದ್ದವರ ಜವಾನ ತನ್ನ ಕೋಟು, ಟವಲು ಇಡುತ್ತಿದ್ದ ಕನ್ನ ಎಂದು ತಿಳಿಯಬಾರದು. ಮಿಕ್ಕ ರೂಂಗಳ ಅಳತೆ ಆಕಾರ ಮನಸ್ಸಿಗೆ ಒಪ್ಪುವಂತಿರಬೇಕು. ಚೆನ್ನಾಗಿ ಗಾಳಿ ಬೆಳಕು, ಆಡುವಂತಿರಬೇಕು. ಈಗಿನ ಸೌರವ್ಯೂಹದ, Solar systemನ, ರಚನೆ ಕಟ್ಟಳೆಗಳ ಪ್ರಕಾರ ಸೂರ್ಯಕಿರಣಗಳು ಯಾವಾಗಲೂ ಅಲ್ಲಿಗೆ ಬರದಿರಬಹುದು;

ಆದರೆ, ನಮಗೆ ಅತ್ಯಗತ್ಯವಾದಾಗ ಅವು ಸಿಗುವಂತಿರಬೇಕು. ಮಿಕ್ಕ ಎರಡು ರೂಂಗಳ ಪೈಕಿ ಒಂದು ಡ್ರಾಯಿಂಗ್ ರೂಂ ಆಗಿ ಉಪಯೋಗಿಸುವಂತಿರಬೇಕು. ಆದ್ದರಿಂದ ಅದು ಚಚ್ಚೌಕವಾಗಿರಕೂಡದು; ಮೂಲೆ ಮೂಲೆಯಾಗಿರಬೇಕು. ಊಟದ ಮನೆ ದುಂಡಗೆ ಇದ್ದು, ಅತಿಥಿಗಳು ಒಬ್ಬರನ್ನೊಬ್ಬರು ನೋಡುವಂತಿದ್ದು, ಸಂಭಾಷಣೆಗೆ ಸಹಾಯವಾಗಬೇಕು. ಉಳಿದ ರೂಮನ್ನು ನಾನು ಆಫೀಸು ರೂಮಾಗಿ ಉಪಯೋಗಿಸಲಿಚ್ಛಿಸುತ್ತೇನಾದುದರಿಂದ ಅದು ನನ್ನ ಮನಸ್ಸಿಗೆ ಒಪ್ಪುವಂತಿದ್ದೇ ತೀರಬೇಕು. ಅಂದರೆ, ಅದು ಸ್ಫೂರ್ತಿದಾಯಕವಾಗಿರಬೇಕು. ಇಲ್ಲದಿದ್ದರೆ ಮಾಲೀಕರಿಗೆ ಬಾಡಿಗೆ ದೊರೆಯದಿರುವ ಸಂಭವವಿದೆ. ಅಡಿಗೆ ಮನೆಯ ಅಳತೆ, ಆಕಾರ, ಅಂದಗಳಲ್ಲಿ ನನಗೆ ಯಾವ ವಿಧವಾದ ಆಸಕ್ತಿಯೂ ಇಲ್ಲ. ಆದರೂ ಅಡಿಗೆ ಮಾಡುವಾಕೆಗೆ ಆಸಕ್ತಿ ಇರುತ್ತದಾದುದರಿಂದ ಅದು ವಿಶಾಲವೂ, ಹರ್ಷದಾಯಕವೂ, ಕಡೆಯ ಪಕ್ಷ ಅಸಮಾಧಾನ ಕೋಪಗಳಿಗೆ ಖಡ್ಗಪ್ರಾಯವಾಗಿಯೂ ಇರತಕ್ಕದು. ಬಚ್ಚಲು ಮನೆಯೂ ವಿಶಾಲವಾಗಿರಬೇಕು. ಸ್ನಾನ ಮಾಡುವುದಕ್ಕೆ ಅನುಕೂಲವಾಗಿ ಮಾತ್ರವಲ್ಲದೆ, ಜಾರಿ ಬಿದ್ದರೆ ಗೋಡೆ ತಲೆಗೆ ಹೊಡೆಯದಂತೆಯೂ ಇರಬೇಕು. ಆದರೆ, ಜಾರಿಕೆಯಾಗುವ ಬಚ್ಚಲುಮನೆಯನ್ನು ತಡೆಯಲಾಗುವುದೆಂದು ಮಾತ್ರ ತಿಳಿಯಬಾರದು. ಒಲೆಗಳು ಅಪ್ಪ ತಾಂಡವಕ್ಕೆ ಮೂಲವಾಗಕೂಡದು. ಅಂಥ ಒಲೆಗಳುಳ್ಳ ಮನೆಗಳ ಮಾಲೀಕರು ಪಟ್ಟಿಯಿಂದ ತಮ್ಮ ಹೆಸರುಗಳನ್ನು ತೆಗೆದುಹಾಕಬೇಕೆಂದು ಈ ಮೂಲಕ ತಿಳಿಯಪಡಿಸಿ, ಕಡೆಯಲ್ಲಿ ಒಂದು ವೇಳೆ ಅವರೂ ಉಪಯೋಗಕ್ಕೆ ಬರಬಹುದಾದ ಸಂಭವವಿರುವುದರಿಂದ ತಮ್ಮ ಹೆಸರುಗಳನ್ನು ಪಟ್ಟಿಯ ಕೊನೆಯಲ್ಲಿ ಪುನಃ ಸೇರಿಸಿಕೊಳ್ಳಬಹುದೆಂದು ಈ ಮೂಲಕ ಉತ್ತೇಜನ ಕೊಡಲಾಗುತ್ತಿದೆ. ಏಕೆಂದರೆ, ಬೇರೆ ಎಲ್ಲ ವಿಷಯಗಳೂ ಸಮಾಧಾನಕರವಾಗಿದ್ದರೆ, ಒಲೆಗಳನ್ನು ಮಾಲೀಕನ ಖರ್ಚಿನಲ್ಲಿ ಅಗೆಸಿಹಾಕಿ ಬೇರೆ ಕಟ್ಟಿಸಿಕೊಳ್ಳಬಹುದಾದ ಸಂಭವ ಯಾವಾಗಲೂ ಇದ್ದೇ ಇರುತ್ತದೆ.

"ಮನೆಯ ಮುಂದೆ ಒಂದು ಚಿಕ್ಕ ತೋಟವಿರಬೇಕು. ಇಲ್ಲದಿದ್ದರೂ, ಮರಗಳ ಒಂದು ಸಾಲು ಇರಬೇಕು. (ಮರಗಳು ತಮ್ಮವಾದರೂ ಆಗಬಹುದು, ಇತರರದಾದರೂ ಆಗಬಹುದು.)

"ಮನೆ ಇರಬೇಕಾದ ಸ್ಥಳದ ವಿಚಾರ:—ಮನೆ ಬೆಂಗಳೂರಿನಲ್ಲಿರಬೇಕು. ನಿಜವಾಗಿಯೂ ಬೆಂಗಳೂರಿನಲ್ಲಿ, ನಿಜವಾದ ಬೆಂಗಳೂರು ಎಂದು ಕರೆಸಿಕೊಳ್ಳುವ ಭಾಗದಲ್ಲಿ ಇರಬೇಕು. ಯಲಹಂಕ, ಯಶವಂತಪುರ, ಎಡೆಹಳ್ಳಿ ಮುಂತಾದ ಪ್ರದೇಶಗಳು ನಿರರ್ಥಕ ಪ್ರದೇಶಗಳೆಂದು ಒತ್ತಿ ಒತ್ತಿ ಹೇಳುತ್ತೇನೆ".

"ಇನ್ನು ಅತ್ಯಂತ ಮುಖ್ಯವಾದ ವಿಚಾರ:—ಅಂದರೆ, ಬಾಡಿಗೆ. ಎಷ್ಟು ಬಾಡಿಗೆ ಬೇಕು ಎಂದು ಹೇಳುವ ಭಾರ ನಿಮ್ಮದು. ಬೇಕಾದರೆ, ಒಂದು ಎಚ್ಚರಿಕೆ

ಕೊಡುತ್ತೇನೆ. ಶುದ್ಧ ಮೂಢತನ, ಮಂಕುತನ, ತಿಳಿಗೇಡಿತನ ಬಿಟ್ಟುಬಿಡಿ ಈಗ ನೀವು ಯಾವ ಲಾಭಗಾರ(Profiteer)ನ ಜತೆಯಲ್ಲೂ ವ್ಯವಹಾರ ನಡೆಸುತ್ತಿಲ್ಲ. ಆರು ತಿಂಗಳ ಬಾಡಿಗೆ ಮುಂಗಡವಾಗಿ ಕೊಡಲೇಬೇಕೆಂದು ನೀವು ಹಟ ಹಿಡಿದರೆ, ಸರಿ, ಹೇಗೊ ಸಾಲವನ್ನೊ (ನಿಮ್ಮಲ್ಲೊ ಅಥವಾ ಇನ್ನೆಲ್ಲೊ) ಸೋಲವನ್ನೊ ಮಾಡಿ ಋಣ ತೀರಿಸುತ್ತೇನೆ. ಮುಂಗಡ ಇಲ್ಲದೆ ಪ್ರತಿ ತಿಂಗಳೂ ಬಾಡಿಗೆ ಕೊಡುವುದೇ ನಮಗೆ ಅನುಕೂಲ."

ಬರೆದಾದ ಮೇಲೆ ಈ ಕಾಗದವನ್ನು ಸರೋಜಳಿಗೆ ಕೊಟ್ಟು, "ನೋಡಿದೆಯಾ! ಕಲೋಪಾಸಕನ ಅಭಿಪ್ರಾಯದಲ್ಲಿ ಅದರಲ್ಲಿರುವ ಒಂದು ಅಕ್ಷರವನ್ನೂ ಕಡಿಮೆ ಮಾಡಲಾರೆ."

ಅವಳು ಎಚ್ಚರಿಕೆಯಿಂದ ಪೂರ್ತಿ ಓದಿ, "ಓದೋದಕ್ಕೇನೋ ಮನೆ ಚೆನ್ನಾಗಿ ತೋರುತ್ತೆ. ಆದರೆ, ಜಾಹೀರಾತಿಗೆ ಇಷ್ಟನ್ನೂ ತೆಗೆದುಕೊಳ್ತಾರೆಯೆ?" ಎಂದಳು.

"ಒಂದು ತಿಂಗಳ ಬಾಡಿಗೆ ಹಿಡಿಯುತ್ತೆ. ಅದರೂ ಪ್ರತಿಯೊಬ್ಬನೂ ಇದೊಂದು ಕುಚೋದ್ಯ ಎಂದುಕೊಳ್ಳಬಹುದು."

"ಹುಂ, ಸರಿ. ಹಾಗಾದರೆ ನಾನು ನಾಳೆ ನರಸಮ್ಮನವರ ಮನೆಗೂ, ಕಮಲಾಕ್ಷಿ ಮನೆಗೂ ಹೋಗಿ, ಯಾವುದಾದರೂ ಮನೆಯ ಮೇಲೆ ಕಣ್ಣಿಟ್ಟಿರಬೇಕೆಂದು ಹೇಳುತ್ತೇನೆ." ಕಾಗದವನ್ನು ಸ್ವಲ್ಪ ಹೊತ್ತು ಹಾಗೆ ತಿರುಗಿಸಿ ತಿರುಗಿಸಿ ನೋಡಿ, "ಇಷ್ಟು ಚೆನ್ನಾಗಿ ಬರೆದುದನ್ನು ಸುಮ್ಮನೆ ವ್ಯರ್ಥಮಾಡಿದ ಹಾಗಾಗುತ್ತಲ್ಲ" ಎಂದಳು.

ಆದರೆ, ನನ್ನ ಅಂತರ್ಯದಲ್ಲಿ ಕಲೋಪಾಸಕನು ಅದನ್ನು ವ್ಯರ್ಥಮಾಡಕೂಡದೆಂದು ಆಗಲೆ ನಿಶ್ಚಯಿಸಿದ್ದನು.

—ಬೆ. ಹಂ.

ಕೃಷ್ಣರಾಜಸಾಗರದಿಂದ ಒಂದು ಬಿಸಿಬಿಸಿ ವರ್ತಮಾನ: ಕಟ್ಟೆಯಿಂದ ಮುಂದಕ್ಕೆ ಯಾರು ಹೆಚ್ಚಾಗಿ ಬಗ್ಗುತ್ತಾರೆ ಎಂದು ಹಲವರು ಪಂದ್ಯ ಕಟ್ಟಿದ್ದಾಗ, —ಅಕಸ್ಮಾತ್ತಾಗಿ ಒಬ್ಬ ಗೆದ್ದ.

ಪತ್ರಿಕಾಲಯದ ಕಸದ ಬುಟ್ಟಿ

ಸಾಹಿತ್ಯ ಸಾಮ್ರಾಜ್ಯದಾಯುಗವು ಮೊದಲಾಗೆ
ಜನನವೈದೆ ನೀ ಕಸದ ಬುಟ್ಟಿ!

ಸಾಹಿತ್ಯಸೇವೆ ಮಾಳ್ಪ ಮನುಜರ್ಗಿತ್ತಿಹ
ಸಾಸಿರಾ ಪತ್ರಿಕೆಗಳೊಡತಿ ನೀನು!

ಬಿದಿರಿನಲಿ ಜನಿಸಿಯೂ ಹೆಸರಾದೆ ನೀ ಜಗದೆ
'ಸಾಹಿತಿಯ ಮಾರಿ'ಯೆಂದು.

ನವಸಾಹಿತಿಯ ಆಕೃತಿಯು ಪತ್ರಿಕಾಲಯಕೆ ಬರಲಾಗೆ
ಅದನೊಮ್ಮೆಗೇ ನುಂಗುವೇ, ನ್ಯಾಯವಿದುವೆ?

ಸಾಹಿತ್ಯ ದೇವಿಗೈ ಅರ್ಪಿತದ ಮಾಲೆಗಳು ಸೇರುವುವು
ಕಡೆಯೊಳಗೆ ನಿನ್ನ ಉದರವನು!

ನಿನ್ನ ಉದರದ ಆಳವರಿತವರಾರು, ನಿನ್ನ ಹಸಿವಿನ ಕೂಗು
ನೀಗೆ ಶಕ್ತರಿಹರಾರು?

ಪತ್ರಿಕಾ ಕರ್ತರಾ ಗೆಳತಿಯೆನಿಸಿಹೆ ನೀನು, ಗೆಳತಿಯೇಂ?
ಅಲ್ಲಲ್ಲ!—ಸಹಸಂಪಾದಕಿ.

ಎಲೆದೇವಿ! ಬೇಡುವೆನು, ಹಸಿವಿನ್ನು ಇಂಗದೇ
ಎನ್ನಿಸಿತು ಕೃತಿಗಳನ್ನು ನುಂಗಿ ಕೂಡ?

ಇನ್ನಾದರೂ ಕೃಪೆಗೈಯಿ! ಬಂಧಮುಕ್ತಿಯಮಾಡು!
ನಿನ್ನ ಸೇವೆಯ ಗೈದು ತಣಿದಿಹೆನು ನಾನು!

—ವೆಂಕಟ್ಟು.

"ಏನಮ್ಮ, ಮಿತವಾಗಿ ಊಟಮಾಡಿದೆ ತಾನೆ?" ಎಂದು ತಾಯಿ ಕೇಳಿದಳು. "ಇನ್ನು ಇಲ್ಲ" ಎಂದಿತು ಮಗು.

ನೌಕರನಿಗೆ ಬಿರುದು ಬಂದಿದ್ದು

ಹೆಬ್ಬಿಗುಬ್ಬಾಲೆಯಲ್ಲಿ ಒಬ್ಬ ನೌಕರನಿದ್ದನು. ಆತನು ಕೆಲಸ ಶುರು ಮಾಡಿದಾಗ ಸಣ್ಣ ಕೊಠಡಿಯೊಂದರಲ್ಲಿ, ಇನ್ನೂ ಮೂವರು ನೌಕರರೊಡನೆ, ಇಂಡ—ಗೆ ಪುಸ್ತಕವನ್ನು ಬರೆಯುತ್ತಿದ್ದನು. ಕೆಲವು ದಿನಗಳಾದ ಮೇಲೆ ಬಡತಿ ದೊರೆತಾಗ ಬೇರೆ ಕೊಠಡಿಯಲ್ಲಿ ಇನ್ನೊಬ್ಬ ನೌಕರನೊಂದಿಗೆ ಚೆನ್ನಾಗಿರುವ ಮೇಜಿನ ಮೇಲೆ ಬರೆಯುವಂತಾದನು. ಆ ವೇಳೆಗೆ ಕಛೇರಿಯ ಕೆಲಸವನ್ನು ಈ ರೀತಿ ಮಾಡಬೇಕು, ಇಂತಹವರು ಇಂತಹ ಕೆಲಸ ಮಾಡಬೇಕು, ಎಂದು ಒಂದು ಪಟ್ಟಿಯನ್ನು ಮಾಡಿ ದೊಡ್ಡ ಸಾಹೇಬರಿಗೆ ಒಪ್ಪಿಸಿದನು. ದೊಡ್ಡ ಸಾಹೇಬರೂ ಇದನ್ನ ಅನುಮೋದಿಸಿ, ಆ ವಿತರಣ ಕೆಲಸಕ್ಕೆ ಆತನನ್ನೇ ನಿಯಮಿಸಿದರು. ಕೆಲಸದ ಏರ್ಪಾಡನ್ನು ಇಷ್ಟು ಚೆನ್ನಾಗಿ ಮಾಡಿದ ದೊಡ್ಡ ಸಾಹೇಬರಿಗೆ ಹೆಸರು ಬಂದು ಅವರು ಮಂತ್ರಿಗಳೂ ಆಗಿಬಿಟ್ಟರು.

ಅವರನ್ನೇ ನಂಬಿದ್ದ ನೌಕರನೂ ಆ ಕಛೇರಿಯ ಅಧಿಕಾರಿಯಾಗಿ ದೊಡ್ಡ ಕೊಠಡಿಯೊಂದರಲ್ಲಿ ತಾನೊಬ್ಬನೇ ಕುಳಿತು, ಹಸುರು ಬಟ್ಟೆ ಹಾಸಿದ ದೊಡ್ಡ ಹೊಸ ಮೇಜಿನ ಮೇಲೆ ಕುಳಿತು, ಉಗುರು ಕತ್ತರಿಸಿಕೊಳ್ಳುವಂತಾಗಿ ನೂರು ಜನ ನೌಕರರ ಮೇಲಧಿಕಾರಿಯಾದನು. ಇನ್ನೇನು ಎರಡು ದಿನಗಳಲ್ಲೇ ಹೊಸ ವರ್ಷದ ಆರಂಭದಲ್ಲಿ ಆತನಿಗೆ ಬಿರುದು ಬಂದೇ ಬರುತ್ತೆಂಬುದು ಖಂಡಿತವಾದ ಸುದ್ದಿಯಾಯಿತು. ಹೊಸ ವರ್ಷವೂ ಬಂತು. ಆದರೆ, ಬಿರುದು ಬರಲೇ ಇಲ್ಲ.

ಆಗ ಯುದ್ಧವು ಆರಂಭವಾಯ್ತು. ಎಲ್ಲ ಕಛೇರಿಗಳಿಂದಲೂ ಸೈನ್ಯಕ್ಕೆ ಜನ ಸೇರಲಾರಂಭಿಸಿದರು. ಕೆಲಸವನ್ನು ಆದಷ್ಟು ಕಡಿಮೆ ಮಾಡಬೇಕೆಂಬ ಚಳುವಳಿ ಹುಟ್ಟಿತು. ನಮ್ಮ ಅಧಿಕಾರಿಯೂ ಕೆಲಸವನ್ನು ಕಡಿಮೆ ಮಾಡಿ, ಅನವಶ್ಯಕವಾದ ಕೆಲಸಗಳನ್ನು ಮೂಲೆಗೊತ್ತಿ, ಮುಖ್ಯವಾದ ಕೆಲಸವನ್ನು ಮಾತ್ರ ಮಾಡಬೇಕೆಂದು ಹೊರಟನು. ಹಾಗೆ ಮಾಡಿದ್ದರಲ್ಲಿ ತನ್ನೊಬ್ಬನಿಂದಲೇ ಕಛೇರಿಯ ಕೆಲಸವೆಲ್ಲವೂ ಆಗುವುದೆಂಬುದನ್ನು ಮನಗಂಡನು. ಹಾಗೆಯೇ ಮಾಡಲು ಪ್ರಯತ್ನಿಸಿದನು. ಅಂತಾಗಿ, ಹುರಳಿ ಚಿಕ್ಕ ಕೊಠಡಿಗೆ ಬಂದು ಹಳೆಯ ಮೇಜಿನ ಮೇಲೆ ಎಲ್ಲ ಕೆಲಸವನ್ನೂ ಮಾಡಲಾರಂಭಿಸಿದನು—ಮೊದಲಿನಂತೆಯೇ.

ಆ ವರ್ಷದ ಬಿರುದಾವಳಿಯಲ್ಲಿ ಆತನ ಹೆಸರೇ ಮಿಕ್ಕ ಹೆಸರುಗಳಿಗೆ ಮೊದಲಾಗಿ ಬಂದಿತು.

—ಆದರೆ, ಇದೆಲ್ಲವೂ ಹೆಬ್ಬಿಗುಬ್ಬಾಲೆಯಲ್ಲಿ—

———o———

ಶ್ಯಾಮಣ್ಣನ ಶುಕ್ರಯೋಗ!

ಶ್ಯಾಮಣ್ಣ ಬಹಳ ಯೋಚಿಸಿದ. ಕಡೆಗೆ ಧೈರ್ಯತೊಂಬಿ ತಾಯಿಯನ್ನೊಮ್ಮೆ ಕೇಳಿಯೇಬಿಡಬೇಕೆಂದು ಅಡಿಗೆ ಮನೆಕಡೆ ಹೊರಟ ಅಲ್ಲಿ ಅವನ ತಾಯಿ ಹೂ ಕಟ್ಟುತ್ತಿದ್ದರು. ಇವನು ಮೆಲ್ಲನೆ ಹೋಗಿ ಅವರ ಹಿಂದೆ ನಿಂತು, ಎದೆ ನೀವಿಕೊಂಡು ಕೇಳಿದ—"ಏನಮ್ಮ, ನನಗೆ ಮದುವೆ ಮಾಡುವುದೇ ಇಲ್ಲವೇ ನೀವು?" ಎಂದು!

ತಾಯಿ ಹಿಂತಿರುಗಿ—"ಏನೆಂದೆ? ಮದುವೆ! ನಿನ್ನ ಮಂಗನ ಮೂತಿಗೆ! ಸುಮ್ಮನಿರು ಸಿಂಗಳೀಕ! ತಾಳಿ ಕಟ್ಟಿಸಿಕೊಂಡವಳು ಮೂರು ದಿನ ಬಾಳಬೇಡವೆ? ....ಅಲ್ಲದೆ ನಿನಗೆ ಹೆಣ್ಣು ಯಾರು ಕೊಡ್ತಾರೆ ಅಂತಿದೀಯ?........ಹೋಗು, ಹೋಗು! ನಿನಗೊಂದು ಹೆಣ್ಣು ಅಂತ ಹುಟ್ಟಿದ್ದರೆ ಅದು 'ಕೊಂಗರೋ' ಕಾಡಿನಲ್ಲಿ ನೀಗ್ರೋಗಳ ಬಳಿಯೇ ಇರಬೇಕು" ಎಂದು ಮೂತಿ ತಿವಿದುಬಿಟ್ಟರು!

ಶ್ಯಾಮಣ್ಣನಿಗೆ ಯೋಚನೆ ಇನ್ನೂ ಜಾಸ್ತಿಯಾಯಿತು. "ಅಯ್ಯೋ! ಪಾಪ! ಅವಳು ಅಮೇರಿಕಾದಲ್ಲಿರೋ ಕೊಂಗರೋವಿನಿಂದ ಇಲ್ಲಿಗೆ ಬರಬೇಕಲ್ಲ! ಎಷ್ಟು ಕಷ್ಟ" ಎಂದು ನಿಟ್ಟುಸಿರುಬಿಟ್ಟ! ಬಗೆಹರಿಯದೆ ತಲೆಗೊಂದು ಟೋಪಿ, ಮೈಗೊಂದು ಕೋಟು ಸಿಕ್ಕಿಸಿಕೊಂಡು ಪೇಟೆಕಡೆ ಹೊರಟ!

ಅಹಾ! ಎಂಥ ವಿಚಿತ್ರ ಮೃಗ ಅಂತೀರಾ ನಮ್ಮ ಶ್ಯಾಮಣ್ಣ. ಹಾಗೆ ಪೇಟೆಯಲ್ಲಿ ನಡೆಯುತ್ತಿರಬೇಕಾದರೆ ಎಲ್ಲರ ದೃಷ್ಟಿಯೂ ಇವನ ಮೇಲೆಯೇ! ಹೆದರಿ ನಡುಗಿದ ಮಕ್ಕಳೆಷ್ಟು? ಚೀರಿ, ತಾಯಿಯನ್ನಪ್ಪಿದ ಹಸುಗೂಸುಗಳೆಷ್ಟು? ಥರಥರನೆ ನಡುಗಿದ ಹರಿಣಿಯರೆಷ್ಟೋ ಮಂದಿ! ನಿಜವಾಗಿ ಶುದ್ಧ ಅಷ್ಟಾವಕ್ರ ಇವನು. ಚಿಕ್ಕನ ಕಣ್ಣು; ಸೊಟ್ಟ ಮೂತಿ! ಮೂರು ಮೂರಂಗುಲದ ಗಡ್ಡ! ಆ ಮೂರೂವರೆ ಅಡಿ ದೇಹಕ್ಕೆ ಕೊಳಕಲು ಕೋಟು ಬೇರೆ!........ತಮಾಷೆ ಬಂಗಲೆಯಲ್ಲಿಟ್ಟಿದ್ದರಂತೆ ಇವನನ್ನು ಎರಡು ದಿನ. ಆದರೆ, ಅಲ್ಲಿನ ಮೃಗಪಕ್ಷಿಗಳೆಲ್ಲ ಜೀವರಿದ್ದಾರಿಂದ ಇವನನ್ನು ಖುಲಾಸೆ ಮಾಡಿಬಿಟ್ಟರಂತೆ........

ಹಾಗೇ ಪೇಟೆಯಲ್ಲಿ ಹೋಗುತ್ತಿರಬೇಕಾದರೆ ಎದುರಿಗೆ ಒಂದು ಬೋರ್ಡು ಕಾಣಿಸಿತು "ಹಸ್ತ ಸಾಮುದ್ರಿಕರು" ಎಂತ! ಶ್ಯಾಮಣ್ಣನ ಆನಂದಕ್ಕೆ ಮೇರೆಯೇ ಇರಲಿಲ್ಲ. ನಡುಬೀದಿಯಲ್ಲಿ ನಿಂತಿದ್ದವನು ಒಂದೇ ನೆಗೆತಕ್ಕೆ ಛಂಗನೆ ಹಾರಿ ಅಂಗಡಿಯೊಳಕ್ಕೆ ನುಗ್ಗಿಬಿಟ್ಟ! ಮೊದಲು ಬೆಚ್ಚಿಬಿದ್ದ ಆ ಸಾಮುದ್ರಿಕದವನೂ ಕಡೆಗೆ ಧೈರ್ಯ ತಂದುಕೊಂಡು ಇವನ ಕೈಯನ್ನೂ, ಮೈಯನ್ನೂ, ಮೂತಿಯನ್ನೂ ಪರೀಕ್ಷಿಸಲು ಮೊದಲುಮಾಡಿದ! ಏನೋ ಹೇಳುವುದಕ್ಕೆ ಹೋದಾಗ ಶ್ಯಾಮಣ್ಣ ತಡೆದ!

"ಹಾಗಾದರೆ, ಯಾವ ವಿಷಯ ಹೇಳಲಿ?" ಎಂದು ಕೇಳಿದ ಸಾಮುದ್ರಿಕ ಪಂಡಿತ!

"ನನಗೆ ಮದುವೆ ಆಗುತ್ತೆಯೋ ಇಲ್ಲವೋ ಅಷ್ಟು ಹೇಳಿಬಿಡಿ"

ಹಸ್ತ ಸಾಮುದ್ರಿಕನು ಕೈನೋಡುವುದನ್ನು ಬಿಟ್ಟು ಅವನ ಮುಸುಡಿಯನ್ನೇ ನೋಡುತ್ತ—"ವಕ್ರರೂಪಂ ಶುಕ್ರಯೋಗಃ, ಅಂದರೆ ನಿಮಗೆ ಶುಕ್ರಯೋಗ ಇರುವುದರಿಂದ ಮದುವೆ ಆದರೂ ಆಗಬಹುದು" ಎಂದನು.

"ಹಾಗಾದರೆ ಹೆಣ್ಣು ಎಲ್ಲಿದೆ, ಅಷ್ಟು ಹೇಳಿ ದಯವಿಟ್ಟು" ಎಂದು ಶ್ಯಾಮಣ್ಣ ಕಿವಿಯವರೆಗೆ ಬಾಯಿ ತೆಗೆದು ಕೇಳಿದ.

ಹಸ್ತಸಾಮುದ್ರಿಕ ಯೋಚಿಸಿ—"ಪಕ್ಕದ ಮನೆಯಲ್ಲೇ ಇರುವ ಹಾಗಿದೆ ಹುಡುಗಿ" ಎಂದ.

ಶ್ಯಾಮಣ್ಣನಿಗೆ ಆಶಾಭಂಗವಾಯಿತು—"ಪಕ್ಕದ ಮನೆಯಲ್ಲಿ ಯಾವ ಹುಡುಗಿಯೂ ಇಲ್ಲ" ಎಂದ.

"ಉಂಟೇ! ಹಾಗೆಂದಿಗೂ ಆಗಲಾರದು! ನಿಮಗೆ ಯೋಗ ಬಂದಿರುವುದರಿಂದ ಹುಡುಗಿ ಅಲ್ಲಿ ಇರಲೇಬೇಕು, ಅಥವಾ ಹೊಸದಾಗಿ ಈ ದಿನ ಊರಿಂದ ಬಂದಿರಬೇಕು; ಬೇಕಾದರೆ ಹೋಗಿ ನೋಡಿ" ಎಂದು ನುಡಿದು ಬೇರೊಬ್ಬರ ಕಡೆ ತಿರುಗಿದ.

ಶ್ಯಾಮಣ್ಣ ಬಾಯಿಹಾಕಿ—"ಮತ್ತೆ ನಮ್ಮಮ್ಮ ಹೇಳಿದರು ನಿನಗೆ ನೀಗ್ರೋ ಹೆಣ್ಣೇ ಆಗುತ್ತೆ ಅಂತ" ಅಂದ.

ಸಾಮುದ್ರಿಕ ಪಂಡಿತ ಸ್ವಲ್ಪ ಬೆಚ್ಚಿ, ಯೋಚಿಸಿ "ಅಹುದು, ನೀ=ನೀರೆರೆದು ಗ್ರೋ (grow)=ಬೆಳೆಸಿದ ಎಂದರೆ, ಚಿಕ್ಕಂದಿನಿಂದ ಸಾಕಿದ ಅಂತ; ಅರ್ಥಾತ್ ಪಕ್ಕದ ಮನೆಯವರ ಸಾಕು ಮಗಳೇ ನಿಮ್ಮವಳೆನ್ನಿ" ಎಂದು ಮುಗಿಸಿದ.

ಶ್ಯಾಮಣ್ಣ ಮನೆಗೆ ಬರುವ ಹೊತ್ತಿಗೆ ಮುಚ್ಚಂಜೆಯಾಗಿತ್ತು! ಏನೋ ಯೋಚಿಸಿಕೊಂಡು ತಮ್ಮ ಮನೆ ಕಾಂಪೌಂಡಿನವರೆಗೂ ಬಂದವನು ಅಕಸ್ಮಾತ್ ತಲೆಯೆತ್ತಿ ಪಕ್ಕದ ಮನೆ ಕಡೆ ನೋಡಿದ. ಆಶ್ಚರ್ಯವಾಯಿತು! ಆನಂದವಾಯಿತು! ಮುಖ ಆಕಡೆ ತಿರುಗಿಸಿಕೊಂಡು ಸುಮಾರು ಹದಿನಾರು ವರುಷದ ಸುಂದರ ಬಾಲೆ, ಹಿಂದುಗಡೆ ಎರಡು ಜಡೆಗಳನ್ನಿಳಿಬಿಟ್ಟು, ಶ್ಯಾಮಣ್ಣನಿಗೆ ಸುಮಾರು ಹತ್ತು ಅಡಿ ದೂರದಲ್ಲಿ ನಿಂತಿದ್ದಳು! ಇನ್ನೇನು ಸ್ವರ್ಗವೇ ಸಿಕ್ಕಿದಂತಾಯಿತು ಇವನಿಗೆ! ಆನಂದದ ಭರದಲ್ಲಿ 'ಹೊಳ್' ಎಂದು ಜೋರಾಗಿ ನಕ್ಕುಬಿಟ್ಟ! ಅವಳು ಬೆಚ್ಚಿ, ಹಿಂತಿರುಗಿ ನೋಡಿ, ತನ್ನ ಬಾಯನ್ನು ವಕ್ರಮಾಡಿ ಅಣಕಿಸಿ ಒಳಕ್ಕೆ ಹೊರಟುಬಿಟ್ಟಳು!

ಮೂರನೇ ದಿನ ಅವಳು ಪುನಃ ಇವರ ಮನೆಗೂ ಅವರ ಮನೆಗೂ ನಡುವೆ ಇದ್ದ ಬೇಲಿಯ ಹತ್ತಿರ ಮುಖಮಾಡಿಕೊಂಡು ನಿಂತಿದ್ದಳು. ಇವನು ಎಲ್ಲಿಂದಲೋ ಸರ್ರನೆ ಓಡಿಬಂದು, ಹಿರಿಹಿರಿ ಹಿಗ್ಗುತ್ತ—"ಏಯ್ ಜಯಂತಿ, ಏನು ಹೇಳ್ಲಿ? ಹಸ್ತಸಾಮುದ್ರಿಕ ಹೇಳ್ಬಿಟ್ಟಿದಾನೆ ನೀನು ಮದುವೆಯಾದ್ರೆ ನನ್ನನ್ನೇಯಂತೇ !......... ಗೊತ್ತಾಯಿತೇ" ಎಂದು ಹೇಳಿದ. ಅವಳು ಇವನನ್ನು ನೋಡಿ, ನಗು ತಡೆಯಲಾರದೆ, "ನೀನೊಬ್ಬ ಕಮಂಗಿ, ಹೋಗಿ ಮುಸುಡಿಗೆ ಕಸ್ತೂರಿ ಬಳಿದುಕೊಂಡು ಆರತಿ ಎತ್ತಿಸಿಕೊ" ಎಂದು ಜರೆದು ಚಿಗರಿಯಂತೆ ಒಳಕ್ಕೆ ಚಿಗಿದಳು !

"ಹಾಗೆ ಮಾಡಿದರೆ ಮದುವೆ......."

"ಮದುವೆ ?........ಮುಂದಿನ ಜನ್ಮದಲ್ಲಿ !" ಹುಡುಗಿ ಮಾಯವಾಗಿತ್ತು !

ಶ್ಯಾಮಣ್ಣನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಹುಡುಗಿ ಮದುವೆಗೆ ಒಪ್ಪಲಿಲ್ಲ, ಇನ್ನೇನುಗತಿ ಎಂದು ಕೊರಗಿದ ! ಮರುಗಿದ ! ಮೂರು ನಾಲ್ಕು ದಿನ ಮನೆಬಿಟ್ಟು ಹೊರಡಲಿಲ್ಲ ! ದೇಹ ಕೃಶವಾಗುತ್ತ ಬಂತು. ಅನ್ನ ನಿದ್ದೆ ಒಂದೂ ಬೇಡವಾಯಿತು. ಹೀಗೇ ಬಿಟ್ಟರೆ ಕ್ಷಯ ಆಗುತ್ತೆ, ಇವನಿಗೆ ಮನೋರೋಗ ಎಂದು ಡಾಕ್ಟರರು ವರದಿ ಒಪ್ಪಿಸಿದರು. ಆಗ ತಂದೆ ತಾಯಿಗಳಿಗೆ ಯೋಚನೆಗೆ ಆರಂಭವಾಯಿತು.

ಒಂದು ದಿನ ತಾಯಿ ಇವನನ್ನು ಏಕಾಂತದಲ್ಲಿ ಕರೆದು "ಏನೋ ಮಗು, ಏನು ವ್ಯಥೆಯೋ" ಎಂದು ಕಾತುರರಾಗಿ ಕೇಳಿದರು. "ನೋಡಮ್ಮಾ, ಪಕ್ಕದ ಮನೆ ಜಯಂತಿ ಇಲ್ಲವೆ, ಸಾಮುದ್ರಿಕ ಹೇಳಿದ, ಅವಳನ್ನೇಯಂತೆ ನಾನು ಮದುವೆ ಆಗುವುದು ; ಆದರೆ ಅವಳು ಒಪ್ಪಲೇ ಇಲ್ಲ ನೋಡು........"

ತಾಯಿಗೆ ಅರ್ಥವಾಯಿತು. ಅವರು ಪಕ್ಕದ ಮನೆಗೆ ಹೊಸದಾಗಿ ಬಂದಿದ್ದ ಹೆಂಗಸರನ್ನು ವಿಚಾರಿಸಿದರು. ಗಂಡಸರ ಕಿವಿಗೂ ಈ ವಿಚಾರ ಬಿತ್ತು. ಅವರು ಹೇಳಿದರು—"ನಾವೇನೋ ಸಿದ್ಧ ; ಆದರೆ, ನಮ್ಮ ಸಾಕುಮಗಳು ಜಯಂತಿ ಒಪ್ಪಬೇಕು !"

ಅವಳನ್ನು ಒಪ್ಪಿಸುವುದು ಹೇಗೆ? ಶ್ಯಾಮಣ್ಣನಿಗೆ ಹಗಲೂ ರಾತ್ರಿ ಯೋಚನೆ!

ಶ್ಯಾಮಣ್ಣನ ತಂದೆಗೆ ಈ ವಿಚಾರಗಳೊಂದೂ ಗೊತ್ತಿರಲಿಲ್ಲ. ಅವರು, ಮಗನಿಗೆ ಏನೋ ಅಜೀರ್ಣವಾಗಿರಬಹುದು, ಆದರಿಂದಲೇ ಆರೋಗ್ಯ ಕೆಟ್ಟಿದೆ ಎಂದು ಊಹಿಸಿ, ಕೂಡಲೆ ಮಗನನ್ನು ಕರೆದು—"ಏ ಕತ್ತೆ ! ಶುದ್ಧ ಶುಂಠೀಕಾಯಿ ! ಮೂರು ಹೊತ್ತೂ ಮನೆಯಲ್ಲಿ ಬಿದ್ದಿದ್ದರೆ ಇನ್ನೇನಾಗುತ್ತೆ.........ಪಕ್ಕದ ಮನೆ ಹುಡುಗಿಕೂಡ ಬೆಳಗ್ಗೆ ಐದು ಘಂಟೆಗೇ ಎದ್ದು ಒಂದು ರೌಂಡ್ ವಾಕಿಂಗ್ ಹೋಗಿ ಬರುತ್ತೆ........ನೀನೂ ಇದ್ದೀ, ಪುರುಷಾಮೃಗ ! ಅನ್ನಕ್ಕೆ ದಂಡ, ಭೂಮಿಗೆ ಭಾರ" ಎಂದು ಚೆನ್ನಾಗಿ ಬಯ್ದರು !

ತಂದೆ ಬಯ್ದುದ್ದರಿಂದ ಶ್ಯಾಮಣ್ಣನಿಗೆ ಒಂದು ಹೊಸವಿಷಯ ತಿಳಿದಂತಾಯ್ತು. ‘ಹುಡುಗಿ ದಿನವೂ ಬೆಳಗಿನ ಝಾವ ವಾಕಿಂಗ್ ಹೋಗುತ್ತೆ ಅಂತ!’ ಅವನ ಮಂಡೆಯ ಕಾರ್ಗತ್ತಲೆಯಲ್ಲಿ ಬುದ್ಧಿಯ ಮಿಂಚು ಮಿಂಚಿತು! ಅದೇ ವಿಚಾರ ಯೋಚಿಸುತ್ತಾ ರಾತ್ರಿ ಮಲಗಿದ!

ಬೆಳಗಿನ ಝಾವ! ಇದ್ದಕ್ಕಿದ್ದ ಹಾಗೇ ಶ್ಯಾಮಣ್ಣನಿಗೆ ಎಚ್ಚರವಾಯ್ತು. ಹಾಗೇ ಕಿವಿಗೊಟ್ಟು ಆಲಿಸಿದ. ಎದುರು ಮನೆ ಗಡಿಯಾರದಲ್ಲಿ ಐದು ಘಂಟೆ ಹೊಡೆಯಿತು. ಇವನು ಒಂದು ನಿಮಿಷವೂ ತಡಮಾಡದೆ ಹಾಸಿಗೆ ಬಿಟ್ಟಿದ್ದ! ಹಾಗೇ ಹಿತ್ತಲಿನ ನಲ್ಲಿಯಲ್ಲಿ ಮುಖ ತೊಳೆದುಕೊಂಡು, ಕ್ರಾಪ್ ಸರಿಯಾಗಿ ಬಾಚಿಕೊಂಡು, ಬಾಗಿಲಿನ ಬಳಿ ನಿಂತ. ಮುಖದಲ್ಲಿ ಒಂದು ಹೊಸ ಹುಮ್ಮಸ್ಸು ತಾಂಡವವಾಡುತ್ತಿತ್ತು! ಒಂದು ಕೈ ನೋಡೇಬಿಡುತ್ತೇನೆ ಇವತ್ತು ಎಂದು ಧೃಡ ಮನಸ್ಕನಾಗಿ ಅವಳಿಗಾಗಿ ಕಾದಿದ್ದ.

ನಿರೀಕ್ಷಿಸಿಕೊಂಡಿದ್ದ ಹಾಗೇ ಅವಳು ಕರಿಯ ರೇಶ್ಮೆ ಸೀರೆ, ಯಥಾಪ್ರಕಾರ ಎರಡು ಜಡೆಗಳಿಂದಲಂಕೃತಳಾಗಿ ತಮ್ಮ ಮನೆಯಿಂದ ಹೊರಬಿದ್ದಳು.

ಇವನು ಅವಳಿಗೆ ಪತ್ತೆಯಿಲ್ಲದಂತೆ ಅವಳನ್ನೇ ಹಿಂಬಾಲಿಸಿದ. ಮನೆಯಿಂದ ಬಹಳ ದೂರ ಹೋದ ಮೇಲೆ ಒಂದು ನಿರ್ಜನವಾದ, ಎರಡು ಕಡೆಗಳಲ್ಲೂ ಮರಗಳಿಂದ ಮುಚ್ಚಲ್ಪಟ್ಟ ರಸ್ತೆ ಸಿಕ್ಕಿತು. ಇದೇ ಸರಿಯಾದ ಸ್ಥಳವೆಂದು ಭಾವಿಸಿ, ಶ್ಯಾಮಣ್ಣ ಸರಸರನೆ ಮುಂದೆಹೋಗಿ “ಏಯ್ ಜಯಂತಿ, ಒಂದು ಮಾತು........” ಎಂದ.

ಅವಳು ಹಿಂದಿರುಗಿ ನೋಡಿ ಖೊಳ್ಳನೆ ಒಂದು ಸಲ ನಕ್ಕಳು. “ನೋಡು, ನಿನ್ನದು ಕಲ್ಲುಹೃದಯ. ....ನಿನ್ನಿಂದ ನನಗೆ ಕ್ಷಯರೋಗ ಬಂದುಬಿಡುತ್ತೆ. ನೀನು ‘ಹ್ಞೂ’ ಎಂದರೆ ಸಾಕು........”

“ಛೀ! ಕಮಂಗಿ! ಮತ್ತೆ ಮದುವೆ ಮಾತೆತ್ತಿದರೆ ನೋಡಿಕೋ! ನಿನ್ನಂಥ ಗೊಗ್ಗಯ್ಯನನ್ನು ಮದುವೆ ಮಾಡಿಕೊಳ್ಳುವುದಕ್ಕಲ್ಲ ದೇವರು ನನ್ನನ್ನು ಹುಟ್ಟಿಸಿರುವುದು........ತೊಲಗಿಹೋಗು ಹೆಗ್ಗಣ!”

“ಹಾಗಾದರೇನು ಇಲ್ಲವೆಂದೇ ಖಂಡಿತವೋ, ಜಯಂತಿ?”

ಅನುಮಾನ ಬೇರೆ ಈ ಅಷ್ಟಾವಕ್ರನಿಗೆ; ನಡೆ, ಇನ್ನು ನನ್ನ ಮಾತಾಡಿಸಬೇಡ.”

ಶ್ಯಾಮಣ್ಣನಿಗೆ ಎರಡನೇ ಸಲ ಆಕಾಶ ತಲೆ ಮೇಲೆ ಬಿದ್ದಂತಾಯಿತು. ಅವನಿಗೆ ಏನೂ ತೋಚದೆ ಹಾಗೇ ಕುಳಿತುಬಿಟ್ಟ! ಅವಳು ತೆರಳಿದಳು ಮುಂದಕ್ಕೆ!

ಐದು ನಿಮಿಷಗಳು ಹಾಗೇ ಕುಳಿತಿದ್ದ ಶ್ಯಾಮಣ್ಣನ ಮಂಡೆಯಲ್ಲಿ ಮತ್ತೊಂದು ಮಿಂಚು ಮಿಂಚಿತು. ಎದ್ದ! "ಅದೇ ಸರಿ!" ಎಂದುಕೊಂಡು ಸೀದಾ ಕೆಂಪಯ್ಯನ ಕೆರೆ ಕಡೆ ಹೊರಟ. ಮನಸ್ಸಿನಲ್ಲಿ ವಿಪರೀತ ತಳಮಳ. "ಆ ಹಾಳು ಹುಡುಗಿ, ಅಷ್ಟು ಚೆನ್ನಾಗಿದೆ, ನನ್ನ ಕಂಡರೆ ಒಲ್ಲೆ ಎನ್ನುತ್ತೆ, ಗಂಡುಬೀರಿ" ಎಂದು ರೇಗಿದ. ಮತ್ತೆ ಇನ್ನು ಇದ್ದೇನು ಪ್ರಯೋಜನ, ಕೆರೆಯ ನೀರೇ ಗತಿ ಎಂದುಕೊಂಡ.

ಕೆರೆಯ ಏರಿಯ ಮೇಲೆ ಬಂದು ನಿಂತ! ತಾನು ಈಜು ಕಲಿತ ಕೆರೆ ಅದು! ಅದರಲ್ಲೇ ಪ್ರಾಣಾರ್ಪಣೆಯಾಗಲಿ ಎಂದು ಮನಸ್ಸು ಗಟ್ಟಿಮಾಡಿ, ಇನ್ನೇನು ಧುಮುಕಬೇಕು ಅಷ್ಟರಲ್ಲಿ ಕೆರೆಯ ಮೂಲೆಯಿಂದ "ಅಯ್ಯೊಯ್ಯೋ" ಎಂದು ಆರ್ತನಾದ ಕೇಳಿಸಿತು. ಇನ್ನೂ ಕತ್ತಲಾಗಿದ್ದರಿಂದ ಕಣ್ಣಿಗೇನೂ ಕಾಣಿಸುತ್ತಿರಲಿಲ್ಲ! ಶಬ್ದ ಬಂದ ಕಡೆ ಹೊರಟ!

"ಯಾರು?........ಯಾರು?........" ಎಂದು ಕೂಗಿದ.

ಒಂದು ನಿಮಿಷದ ಮೇಲೆ—"ಅಯ್ಯೋ........ಸತ್ತೆ... ....ಸತ್ತೆ........" ಎಂದು ನೀರೊಳಗಿಂದ ಯಾರೋ ಕೂಗಿದರು!

ಇವನು ಬೇಗ ನೀರಿಗೆ ಧುಮ್ಮಿಕಿದ! ಶಬ್ದ ಬರುತ್ತಿದ್ದ ಕಡೆ ನುಗ್ಗಿ ಮುಳುಗಿ ಕೈ ಚಾಚಿದ! ಕೈಗೆ ತಲೆಯ ಕೂದಲು ಸಿಕ್ಕಿತು. ಮೇಲಕ್ಕೆತ್ತಿದ! ಯಾರೋ ಹೆಂಗಸು! ಮತ್ತೆ ಹತ್ತಿರ ನೋಡಿದ........ಜಯಂತಿ!!

"ಸಾಯಿ, ರಾಕ್ಷಸಿ! ನಿನಗಿದೇ ಪ್ರಾಯಶ್ಚಿತ್ತ" ಎಂದು ಸ್ವಲ್ಪ ಸಡಿಲಮಾಡಿದ ಹಿಡಿತವನ್ನು.

"ಅಯ್ಯೋ ....ಸಹಾಯ........ಸತ್ತೆ.... ...." ಎಂದಳು ಅವಳು

"ನೀನು ಸತ್ತರೆ ನನಗೇನು ನಷ್ಟ? ನಿನ್ನನ್ನು ಬದುಕಿಸುವುದರಿಂದ ನನಗೇನು ಲಾಭ?" ಎಂದ ಇವನು. ಹಿಡಿತ ಇನ್ನೂ ಸಡಿಲವಾಯ್ತು.

"ಅಯ್ಯೋ........ಬೇಗ ....ಬದುಕಿಸಿ........"

"ನನ್ನ ಮದುವೆ ಆಗ್ತೀಯ ಹೇಳು........"

"ಬದುಗಿಸಿ........ಇಲ್ಲದಿ........ದ್ದರೆ........ಮುಳುಗಿ........"

"ನನ್ನ ಪ್ರಶ್ನೆಗೆ ಹ್ಞೂ ಅನ್ನು" ಹಿಡಿತ ಪೂರ್ತ ಸಡಿಲವಾಯ್ತು! ಜಯಂತಿ ಮತ್ತೊಂದು ಸಲ ನೀರು ಕುಡಿದು 'ಹ್ಞೂ' ಎಂದಳು.

"ಆ ಮೇಲೆ ಮಾತು ಬದಲಾಯಿಸುವ್ಹದಿಲ್ಲವೋ"

"ಇಲ್ಲ........ಲ್ಲ."

ಶ್ಯಾಮಣ್ಣ ಅವಳನ್ನು ದಡಕ್ಕೆಳೆದು ತಂದ! ಆಗತಾನೇ ಬೆಳಗಾಗುತ್ತಿತ್ತು! ಮೆಲ್ಲನೆ ಅವಳ ಕಡೆ ನೋಡಿದ ಎಂತಹ ಚೆಲುವಿನ ಹುಡುಗಿ! ಬರಿಯ ಈಜುವ ಉಡುಪೊಂದನ್ನೇ ಹಾಕಿದ್ದರಿಂದ ಜಲಕನ್ಯೆಯಂತೆ ಕಾಣುತ್ತಿದ್ದಳು ಅವಳ ಕೈಯನ್ನು ಹಿಡಿದುಕೊಂಡು ಮುಂದಕ್ಕೆ ಕರೆತಂದ. ಅಲ್ಲೇ ಮರದ ಬುಡದಲ್ಲಿಟ್ಟಿದ್ದ ಸೀರೆಯನ್ನು ಅವಳು ಉಟ್ಟುಕೊಂಡಳು. ಇಬ್ಬರೂ ಒಬ್ಬರ ಹೆಗಲಮೇಲೊಬ್ಬರು ಕೈ ಹಾಕಿಕೊಂಡು ಮನೆಯ ಕಡೆ ಹೊರಟರು. ದಾರಿಯಲ್ಲಿ ಪ್ರೇಮಾಲಾಪಗಳಿಗೇನೂ ಕೊರತೆಯಿರಲಿಲ್ಲ.

"ಅಂತೂ ಎಷ್ಟು ಕಷ್ಟಕೊಟ್ಟೆಯೋ ಜಯಂತಿ" ಎಂದ ಇವನು.

"ಕಷ್ಟಪಟ್ಟರೆ ಫಲವುಂಟು. ಅಲ್ಲದೆ ನೀ........"

ಅವಳ ಮಾತು ಇದ್ದಕ್ಕಿದ್ದ ಹಾಗೇ ನಿಂತುಹೋಯಿತು! ಎದುರಿನಿಂದ ಪುತ್ರಾನ್ವೇಷಣೆಗಾಗಿ ಅವನ ತಂದೆ ಛಡಿಯನ್ನು ತಿರುಗಿಸುತ್ತ ತಮ್ಮ ಕಡೆಗೇ ಬರುತ್ತಿದ್ದರು. ಇನ್ನೇನು ತನ್ನ ಅವಸ್ಥೆ ಮುಗಿದಂತೆಯೇ ಎನ್ನಿಸಿತು ಶ್ಯಾಮಣ್ಣನಿಗೆ. ಬೆವರಿ ನೀರಾಗಿ ಹೋದ. ಎಲ್ಲಾದರೂ ಓಡಿಹೋಗಿ ಅವಿತುಕೊಳ್ಳಬೇಕೆಂದು ಸುತ್ತಮುತ್ತ ನೋಡಿದ! ಅಷ್ಟರಲ್ಲಿ........

ಶ್ಯಾಮಣ್ಣನಿಗೆ ಎಚ್ಚರವಾಗಿ ಹೋಯಿತು "ಎಂಟು ಘಂಟೆ ಹೊಡೆದರೂ ಹಾಸಿಗೆ ಬಿಟ್ಟೇಳೋ ಪದ್ಧತಿಯಿಲ್ಲ ಈ ಪೆಡಂಭೂತಕ್ಕೆ!.....ಅನಿಷ್ಟ ಅಭ್ಯಾಸ ....!" ಎಂದು ರೇಗುತ್ತಾ ಶ್ಯಾಮಣ್ಣನ ತಂದೆ ಚಿತ್ತದಿಂದ ಹಾಸಿಗೆಯ ಮೇಲಿನ್ನೂ ಹೊರಳಾಡುತ್ತಿದ್ದ ಮಗನ ಸೊಂಟದ ಮೇಲೆ ನಾಲ್ಕು ಛಡಿ ಹೊಡೆದರು ....

—ಬಿ. ವಿ. ಸು.

—o—

ನೀರು ಬೆರೆತ ಹಾಲು ಮಾರಿದ್ದಕ್ಕೆ ಇಬ್ಬರು ಕವಾಡಿಗರಿಗೆ ಶಿಕ್ಷೆ ಆಯಿತಂತೆ. ಇದು ಅಪರಾಧ ಎಂದು ಮೊದಲು ನಿಷ್ಕರ್ಷೆ ಆದುದು ಯಾವಾಗ ಎಂದು ಜನ ಕೇಳುತ್ತಿದ್ದಾರೆ.

✦ ✦ ✦

ಮೊನ್ನೆ ಹೆಬ್ಬಿಗುಬ್ಬಾಲೆಯ ಸ್ಟೇಷನ್ನಿನಲ್ಲಿ ದೊಡ್ಡ ಗಲಭೆ. ರೈಲು ಹೊತ್ತಿಗೆ ಸರಿಯಾಗಿ ಬಂದುದರಿಂದ ಪೋರ್ಟರ್ ಹಿಂದಿನ ಸ್ಟೇಷನ್ ಹೆಸರನ್ನು ಕೂಗಿದ.

✦ ✦ ✦

ಅವರವರಾಶಿ

ಮನುಷ್ಯ ಅಂದಮೇಲೆ ಏತಕ್ಕೋ ಏನೊ, ಅಂತು ಗೊಣಗುತ್ತಲೆ ಇರುತ್ತಾನೆ. ಥು, ಅದು ಹಾಗಾಯಿತು; ಹೀಗಿದ್ದರೆ ಎಷ್ಟು ಚೆನ್ನ; ಅನಿಷ್ಟ; ಇರಬಾರದೇ — ಇದೇ ರಾಮಾಯಣ. ಎಲ್ಲಾ ದೇಶದಲ್ಲೂ ಎಲ್ಲಾ ಕಾಲದಲ್ಲೂ ಹೀಗೆ. ಈಗಂತೂ ಕೇಳಲೆ ಬೇಡ. ಮಾತು ಮಾತಿಗೂ ಕಂಪ್ಲೇಂಟೇ.

ಶನಿವಾರ ವಿಲ್ಲಿ, ಸೀತಾರಾಮು, ನಾನು ಮೂವರೂ ಈ ಯುದ್ಧದ ದೆಸೆಯಿಂದ ನಮಗೊದಗಿದ ಕಷ್ಟಪರಂಪರೆಗಳನ್ನು ನೆನೆನೆನೆದು ನಿಟ್ಟುಸಿರು ಬಿಡುತ್ತಿದ್ದೆವು. ಸೀತಾರಾಮು ಕಂಟ್ರೋಲರ್ ಆಫೀಸಿನಲ್ಲಿ ನಲವತ್ತು ರೂಪಾಯಿನ ಗುಮಾಸ್ತೆ; ನಾಲ್ಕು ಮಕ್ಕಳು, ಹೆಂಡತಿ, ಮುದುಕಿ ತಾಯಿ, ತಮ್ಮ, ಇಷ್ಟು ಮಂದಿಯನ್ನೂ ಕಾಪಾಡುತ್ತಿದ್ದಾನೆ. ವಿಲ್ಲಿ— ವಿಲಿಯಮ್ ಜೇಸುದಾಸನ್ ಅವನ ಪೂರ್ತಿ ಹೆಸರು — ಎಪ್ಪತ್ತೈದು ರೂಪಾಯಿನ ಕಾಲೇಜು ಅಧ್ಯಾಪಕ; ಹೆಂಡತಿ, ಇಬ್ಬರು ಮಕ್ಕಳು ಇದ್ದಾರೆ ನಾನು ೨೫೦ ರೂಪಾಯಿನ ಪ್ರೊಬೇಷನರ್; ಮಕ್ಕಳಿಲ್ಲದ ಸಂಸಾರಿ.

'ಒಂದೆ, ಎರಡೆ ಕಷ್ಟ? ಎಷ್ಟೆಷ್ಟು, ಅದೂ ಎಷ್ಟು ತರ!' ಎಂದ ಸೀತು.

'ಆದರೂ ವೈವಿಧ್ಯದಲ್ಲಿ ಏಕತೆ ಇದೆ ಅಲ್ಲವೆ? unity in diversity, ಆ?' ಎಂದು ವಿಲ್ಲಿ ನಗುತ್ತ ಹೇಳಿದ.

'ಹೌದು. ಎಲ್ಲ ಬೆಳ್ಳಿ ತಗಡಿಗೆ ಬರುತ್ತೆ. ಬಟ್ಟೆ ಹಾಕಬೇಕು, ಹೊಟ್ಟೆ ಹೊರೀಬೇಕು. ಅದು ಮಾಡಬೇಕು, ಇದುಮಾಡಬೇಕು. ಎಲ್ಲದಕ್ಕೂ ಕಾಸು ಬೇಕು' ಎಂದು ಸೀಜು ಉತ್ತರವಿತ್ತ.

'ಈ ಕಷ್ಟ ಸ್ವಲ್ಪವಾದರೂ ಪರಿಹಾರವಾಗುವುದಕ್ಕೆ ಏನಾದರೊಂದು ಆಯುಧ ಬೇಕು. ಒಂದು ಹಬ್ಬ, ಹುಣ್ಣಿಮೆ, ಪಾರ್ಟಿ, ಔತಣ ಆಗಬೇಕಾಯಿತು ಅನ್ನು. ಈ ಲೋಟದಿಂದ ಆ ಲೋಟಕ್ಕೆ ನೀರು ಬಗ್ಗಿಸಿ ಕಾಫಿಯನ್ನ ಎಲ್ಲರಿಗೂ ಸುಲಭವಾಗಿ ಒದಗಿಸುವುದು ಹೇಗಿರುತ್ತೆ. ಮ್ಯಾಜಿಕ್ ಬರಬೇಕಪ್ಪ! ಟೋಪಿ ಒಳಗಿಂದ ಮಾನು ತೆಗೆದು ಸೂಪ್ ಮಾಡಿಸಬಹುದು. ಕಿವಿ ಒಳಗಿಂದ ಮೊಟ್ಟೆ ತೆಗೆದು ಉಪಯೋಗಿಸಬಹುದು. ಒಂದು ಜೇಬಿಂದ ಹಣ್ಣು, ಇನ್ನೊಂದು ಜೇಬಿಂದ ಕೇಕ್ ತೆಗೆದು ಹಂಚಬಹುದು. ಈಗ ಇಷ್ಟಾದರೆ ಸಾಕಪ್ಪ ನನಗೆ. ಸಮಯಕ್ಕೆ ಒದಗುತ್ತೆ ನೋಡು ಶಸ್ತ್ರ' ಎಂದು ಇಲ್ಲಿ ತನ್ನ ಹೆಬ್ಬಯಕೆಯನ್ನು ನಮಗೆ ತಿಳಿಸಿದ.

ಸೀತಾರಾಮು ದಾಸರ ಹಾವಿನಂತೆ ನಿಟ್ಟುಸಿರು ಬಿಡುತ್ತ, 'ನನಗೆ ಇಷ್ಟೆ ಸಾಲದು. ನೋಡಪ್ಪ, ನನ್ನದು ಸಗರನ ಸಂಸಾರ. ಆ ಸಗರ ಮಹಾಭಾರತದ ಕಾಲದಲ್ಲಿ ಇದ್ದರೆ ಏನುಮಾಡುತ್ತಿದ್ದ ಅಂತ ತನ್ನ ಸಾವಿರ ಮಕ್ಕಳನ್ನೂ ಅಕ್ಷಯಪಾತ್ರೆ ತರುವುದಕ್ಕೆ ಕಳು

ಹಿಸುತ್ತಿದ್ದನೇನೊ! ಯಾವ ದೇವರಾದರೂ ನನಗೂ ಒಂದು ಅಕ್ಷಯ ಪಾತ್ರೆ ಕರುಣಿಸಿದರೆ, ಆ ದೇವರಿಗೆ ನೂರು ತೆಂಗಿನಕಾಯಿ ಒಡೆಯುತ್ತೇನೆ' ಎಂದ

'ಅಲ್ಲಾದೀನನ ದೀಪ ಸಾಲದೊ?' ಎನ್ನುತ್ತಾ, ಏಲ್ಲಿ ನಶ್ಯ.

ನಾನು ಹೇಳಿದೆ, 'ನನಗಿನ್ನೂ ಅಷ್ಟು ಸಂಕಟಬಂದಿಲ್ಲ. ಆದರೂ ನನ್ನದೂ ಒಂದು ಬಯಕೆ ಇದೆ. ಸೈಂಟಿಸ್ಟುಗಳು ಏನೇನೊ ಕಂಡುಹಿಡಿದಿದ್ದಾರೆ. ಕಂಡೆನ್ಸ್ಡ್ ಮಿಲ್ಕಂತೆ, ಮಿಲ್ಕ್‌ಪೌಡರ್ ಅಂತೆ, ಆಹಾರದ ಮಾತ್ರೆಗಳಂತೆ—ಇನ್ನೂ ಏನೇನೊ ಮಾಡಿದ್ದಾರೆ. ಇದೆಲ್ಲ ಸರಿ. ಆದರೆ ನೀರಿಗೂ ಇವಕ್ಕೂ ವೈರ ಇಲ್ಲ. ಯಾರಾದರೂ ಮಹಾರಾಯ ವಾಟರ್ ಪ್ರೂಫ್ ಹಾಲನ್ನು ಕೊಡುವಂತಹ ಹಸುವನ್ನು ಸೃಷ್ಟಿಸಬಾರದೆ?'

—ಬಿ. ಚಂ

ಹಣದ ದುರುಪಯೋಗ

ಶೆಟ್ಟರು ಯೋಚಿಸಿದರು. ಆ ಹಳ್ಳಿಯಲ್ಲಿದ್ದ ಒಂದೇ ಒಂದು ಅಂಗಡಿಯಿಂದ ಮೂರು ಕಾಸಿನ ನಶ್ಯ ತರಿಸಬೇಕಾಗಿತ್ತು. ಆದರೆ, ಆ ಅಂಗಡಿಯವನಿಗೂ ಇವರಿಗೂ ಮನಸ್ತಾಪವಿದ್ದುದರಿಂದ ತಾನೇ ಹೋಗುವ ಹಾಗಿರಲಿಲ್ಲ. ಕಡೆಗೆ ಅವರು ಬುದ್ಧಿವಂತಿಕೆಯಿಂದ ಅಲ್ಲೇ ಆಡುತ್ತಿದ್ದ ಆರು ವರ್ಷದ ಹುಡುಗನೊಬ್ಬನನ್ನು ಬಳಿಗೆ ಕರೆದು ಅವನ ಕೈಯಲ್ಲಿ ಒಳ್ಳೆಯ ಮೂರು ಕಾಸು ನಾಣ್ಯವನ್ನಿಟ್ಟು—"ಮಗೂ! ಆ ಎದುರು ಅಂಗಡಿಗೆ ಹೋಗಿ ಮೂರು ಕಾಸಿನ ಮದ್ರಾಸ್ ನಶ್ಯ ತೆಗೆದುಕೊಂಡು ಬಾ ಮತ್ತೆ; ಹಾಗೇ, ಇದೋ! ನಿನಗೆ ಮೂರು ಕಾಸು ಬಹುಮಾನ!" ಎಂದು ಹೇಳುತ್ತಾ, ಪೂರಾ ಸವೆದಿದ್ದ ಮತ್ತೊಂದು ಕಾಲಾಣೆ ನಾಣ್ಯವನ್ನು ಅವನ ಕೈಲಿಟ್ಟರು. ಹುಡುಗ ಹಾರಿಕೊಂಡು ಹೊರಟುಹೋದ.

ಐದು ನಿಮಿಷಗಳಾದ ಮೇಲೆ ಹುಡುಗ ಬಂದ. ಶೆಟ್ಟರು ಕಿವಿಯವರೆಗೂ ಬಾಯಿ ತೆಗೆದು ಸಂತೋಷದಿಂದ—"ಭೇಷ್! ಹುಡುಗ! ಇದ್ದರೆ ಹೀಗಿರಬೇಕು; ಎಲ್ಲಿ ನಶ್ಯಕೊಡು" ಎಂದರು.

ಅದಕ್ಕೆ ಹುಡುಗ ತನ್ನಲ್ಲಿದ್ದ ಕಡಲೆಪುರಿಯನ್ನೆಲ್ಲ ಬಾಯಿಗೆ ತುರುಕಿಕೊಳ್ಳುತ್ತ—"ರ್ರೀ! ನಿಮ್ಮ ಕಾಸು ತುಂಬಾ ಸವೆದು ಹೋಗಿದೆಯಂತೆ. ಬೇರೆ ಕಾಸು ಕೊಟ್ಟರೆ ನಶ್ಯ ಕೊಡುತ್ತಾರಂತೆ" ಎಂದು ಹೇಳುತ್ತಿದ್ದ ಹಾಗೇ ಶೆಟ್ಟರು ಪಕ್ಕದ ಮೋರಿಯೊಳಕ್ಕೆ ಬಿದ್ದಿದ್ದರು!

—ಬಿ. ವಿ. ಸು.

ಅಣ್ಣ ತಂಗಿ

—o—

"ಅಮ್ಮಾ, ಅಣ್ಣ ಹೊಡೆದುಬಿಟ್ಟ. ಊಂ....ಂ....ಂ........"

"ಅವಳೀಕೆ ನನ್ನ ಪುಸ್ತಕ ಮುಟ್ಟಬೇಕು!"

"ಪುಸ್ತಕ ಮುಟ್ಟಿದಾಕ್ಷಣ ಕೊಳ್ಳೆಹೋದುದೇನು? ಅದಕ್ಕಾಗಿ ಮಗುವನ್ನು ಹಾಗೆ ಹೊಡೆಯಬೇಕೇನು? ಕತ್ತೆ........ನಿನಗೆ ಅವಳು ತಂಗಿಯಾಗಿ ಹುಟ್ಟಿದಳಲ್ಲ ...." ಕಿಟ್ಟೀಗೆ ಅಮ್ಮನಿಂದ ಒಂದೇಟು ಬಹುಮಾನ ದೊರಕಿತು.

"ಚಿನ್ನಾ........ಮಾವ ಪೆಪ್ಪರ್‌ಮೆಂಟ್ ತಂದಿದ್ದಾನೆ ತೊಕೋಮಾ........" ಎಂದು ಮಗುವನ್ನು ಸಮಾಧಾನ ಪಡಿಸಿದಳು ತಾಯಿ.

"ಮಾವ, ನನಗೆ ಮಾತ್ರ ಕೊಡು. ಅಣ್ಣನಿಗೆ ಬೇಡ. ಅವನೇ ಮತ್ತೆ ನನ್ನನ್ನು ಸುಮ್ಮಸುಮ್ಮನೆ ಹೊಡೆಯುತ್ತಾನಲ್ಲಾ" ಎಂದು ಲಲಿತೆ ಪುಟ್ಟ ಕೈಯನ್ನು ಮಾವನ ಕಡೆಗೆ ನೀಡಿದಳು.

"ಅಮ್ಮನೇ ಅಣ್ಣನ್ನ ಹೊಡೆದುಬಿಟ್ಟಳಲ್ಲಾ" ಎಂದು ಮಾವ ರಾಮುವು ಮಕ್ಕಳಿಬ್ಬರ ಕೈಯಲ್ಲೂ ಎರಡೆರಡು ಪೆಪ್ಪರ್‌ಮೆಂಟ್‌ಗಳನ್ನಿತ್ತನು.

ಕಿಟ್ಟಿಯು "ನನಗೆ ಕೊಡುವುದೂ ಬಿಡುವುದೂ ನಿನ್ನನ್ನು ಕೇಳಿಯೇ ಮಾಡಬೇಕೇನು ಮಹಾರಾಣೀ! ವೆ ವ್ವೆ ವ್ವೆ ವ್ವೇ" ಎಂದು ಲಲಿತಳನ್ನು ಅಣಕಿಸಿ, ಅಲ್ಲಿಂದ ಓಡಿದನು.

ಲಲಿತೆಯೂ ಆಟವಾಡಲು ಹೊರಟು ಹೋದಳು. ಐದು ನಿಮಿಷದೊಳಗೆ ಲಲಿತೆಯು ಅಳುತ್ತಾ ಹಿಂದಿರುಗಿದಳು. "ಮಾವ, ನನ್ನ ಪೆಪ್ಪರ್‌ಮೆಂಟನ್ನೂ ಅಣ್ಣನೇ ಕಿತ್ತು ತಿಂದುಬಿಟ್ಟ ಊಂ ಂ ಂ" ಎಂದು ರಾಗ ಎಳೆಯಲಾರಂಭಿಸಿದಳು.

"ಲೋ, ಕತ್ತೆ. ಇಲ್ಲಿ ಬಾ, ಚೆನ್ನಾಗಿ ಶಾಸ್ತಿಮಾಡುತ್ತೇನೆ" ಎಂದು ದೂರದಲ್ಲಿ ನಿಂತು ನಗುತ್ತಲಿದ್ದ ಕಿಟ್ಟಿಯನ್ನು ಗದರಿಸುತ್ತಾ ಲಲಿತೆಗೆ ಪುನಃ ಪೆಪ್ಪರ್‌ಮೆಂಟ್ ಕೊಟ್ಟು ಸಂತೈಸಿದನು ಮಾವ.

ಸರಿ, ಊಟದ ಹೊತ್ತು ಬರುತ್ತಲೂ "ಅಮ್ಮಾ ನನ್ನ ತಟ್ಟೆಯನ್ನು ಜಜ್ಜಿಬಿಟ್ಟನಲ್ಲೇ, ಅಣ್ಣಾ" ಎಂದು ಕಿಟ್ಟನೆ ಕಿರಿಚಿಕೊಂಡಳು ಲಲಿತೆ.

"ಅವಳೇಕೆ ನನ್ನ ತಟ್ಟೆಯನ್ನು ತೆಗೆದು ಹಾಕಿಕೊಂಡಳಂತೆ?" ಎಂಬುದು ಕಿಟ್ಟಿಯ ಉತ್ತರ.

“ಲೇ, ಲಲಿತೇ, ಆದರೂ ನೀನು ಅನ್ಯಾಯ ಜಗಳವಾಡುತ್ತೀಯ ಅಣ್ಣ ನೊಡನೆ. ಅವನ ತಟ್ಟೆಯನ್ನು ನೀನೇಕೆ ತೆಗೆದೆ?” ಎಂದು ಅನ್ನವನ್ನು ತಪ್ಪಲೆ ಯಿಂದ ತೋಡುತ್ತಾ ಅಂದಳು ತಾಯಿ.

“ಅಣ್ಣನ ತಟ್ಟೆಯೇ ಮತ್ತೆ ಪಾಲೀಷ್ ಹೋಗದೆ ಥಳಥಳಿಸುತ್ತಲಿದೆ. ಅದೇ ನನಗೆ ಬೇಕು” ಎಂದು ಲಲಿತೆ.

“ಊಹೂಂ....... ನಾನು ಕೊಡೋಲ್ಲ.......”

“ಊಂ........ನನಗೆ ಅದೇ ಬೇಕು........”

“ಅದಾಗೋಲ್ಲ ಹೋಗು........”

“ಅಯ್ಯೋ, ಅಮ್ಮಾ ಕಿತ್ತುಕೊಂಡುಬಿಟ್ಟನಲ್ಲೇ.”

“ಅಯ್ಯೋ ರಾಮಾ! ಬೆಳಗಾದರೆ ಅರ್ಧರಾತ್ರಿಯವರೆವಿಗೂ ನಿಮ್ಮ ಜಗಳವೆ, ಏನೇ ಲಲಿತೇ? ಹೇಳಿದರೆ ಕೇಳೋಲ್ಲ, ‘ನಾನು ಉಜ್ಜುತ್ತೀನಿ, ನಾನು ಉಜ್ಜು ತ್ತೀನಿ’ ಎಂದು ಜಂಭವಾಗಿ ಕಲ್ಲು ಮಣ್ಣು ಎಲ್ಲವನ್ನೂ ಹಾಕಿ ಬೆಳ್ಳಿಯ ತಟ್ಟೆಯನ್ನು ಉಜ್ಜಿದರೆ, ಅದೇನಾಗಬೇಕು? ಪಾಲೀಷ್ ಹೇಗೆ ನಿಲ್ಲುತ್ತೆ? ನಾಳೆ ಅಂಗಡಿಗೆ ತೆಗೆದುಕೊಂಡು ಹೋಗಿ ಪಾಲೀಷ್ ಹಾಕಿಸಿಕೊಡುತ್ತೇನೆ. ಈಗ ಊಟಕ್ಕೆ ಎಲೆ ಹಾಕಿಕೋ, ಇಕೋ”

“ಆದರೆ ನನಗೂ ಎಲೆ ಹಾಕಮ್ಮಾ, ನನ್ನ ತಟ್ಟೆಗೂ ಪಾಲೀಷ್ ಹಾಕಿ ಕೊಡಮ್ಮಾ.”

“ನಿನಗ್ಯಾಕೋ? ನಿನ್ನ ತಟ್ಟೇನೆ ಹೊಸದಾಗಿ ಫಳಫಳನೆ ಹೊಳೆಯುತ್ತಿದೆ ಯಲ್ಲೋ”

“ಊಹೂಂ........ನನ್ನ ತಟ್ಟೆಗೂ ಹಾಕಬೇಕು. ಇಲ್ಲದಿದ್ದರೆ ಲಲಿತದ್ದು ಬಹಳ ಹೊಸದಾಗಿಬಿಡುತ್ತದೆಯಲ್ಲಾ. (ಇಲ್ಲವೋ, ಸುಮ್ಮನೆ ಅವಳ ತಟ್ಟೆಗೆ ಪಾಲೀಷ್ ಹಾಕಿಸುತ್ತೇನೆ ಅಷ್ಟೆ) ಎಂದು ಕಿಟ್ಟೀಗೆ ಅಮ್ಮನು ಕಣ್ಣು ಮಿಟಕಿಸಿ ಸಂಜ್ಞೆ ತೋರಿಸಿದಳು ತಾಯಿ.

ಇಂತಹ ರಗಳೆಯಿಲ್ಲದೆ ಅವರಿಬ್ಬರೂ ಊಟಮಾಡಿ ಎದ್ದ ದಿನವೇ ಇಲ್ಲ.

ಕಾಫಿಯ ಹೊತ್ತು ಬಂದುಬಿಟ್ಟರಂತೂ ರೇಘೋ ರಂಪು. “ಅಮ್ಮಾ ನನಗೆ ಈ ಲೋಟದಲ್ಲೇ ಬೇಕು.” “ಅಮ್ಮಾ, ನನಗೂ ಅದರಲ್ಲೇ ಬೇಕು” “ನನಗೆ ಮೊದಲು” “ನನಗೆ ಮೊಟ್ಟಮೊದಲು ಕೊಡದಿದ್ದರೆ ನನಗೆ ಕಾಫಿಯೇ ಬೇಡ.” ಇದೊಂದು ಪ್ರಕರಣ, ಇಬ್ಬರ ನಡುವೆ ಜಗಳವಿಲ್ಲದ ದಿವಸವೇ ಇಲ್ಲ.

ಮದರಾಸಿನಲ್ಲಿ ಕೆಲಸದಲ್ಲಿದ್ದ ಮಾವ ರಾಮುವು ನಾಲ್ಕು ದಿನ ರಜದಲ್ಲಿ ಬೆಂಗಳೂರಲ್ಲಿರುವ ಅಕ್ಕನ ಮನೆಗೆ ಬಂದಿದ್ದನು. ಈ ಮಕ್ಕಳ ಜಗಳವನ್ನು ಕಂಡು ವಿಸ್ಮಯಗೊಂಡನು. ರಾಮುವು ತಾನು ಬರುವಾಗ ಕಿಟ್ಟೀಗೊಂದು ಫೌಂಟನ್ ಪೆನ್ನನ್ನೂ, ಲಲಿತೆಗೊಂದು ಜೊತೆ ಚಪ್ಪಲಿಗಳನ್ನೂ ಕೊಂಡು ತಂದಿದ್ದನು. ಕಿಟ್ಟೀಗೆ ಎರಡೂ ಬೇಕೆಂಬ ಆಸೆ. ಲಲಿತೆಗೂ ಹಾಗೆಯೇ. ಲಲಿತೆಯ ಚಪ್ಪಲಿ ಅವಳ ಕಾಲಿಗೆ ಸ್ವಲ್ಪ ದೊಡ್ಡದಾಗಿತ್ತು. ಆದರೆ ಕಿಟ್ಟೀಗೆ ಅಳತೆ ಸರಿಯಾಗಿತ್ತು. ಅದನ್ನು ತನಗೆ ಕೊಟ್ಟುಬಿಡುವಂತೆಯೂ, ಮತ್ತೊಂದು ಸಲ ಬರುವಾಗ ಲಲಿತೆಗೆ ಇನ್ನೊಂದು ಜೊತೆ ಕೊಂಡು ತಂದುಕೊಟ್ಟುಬಿಡುವಂತೆಯೂ ಕಿಟ್ಟೀ ರಾಮೂಗೆ ಯೋಚನೆ ಹೇಳಿದ. ಆದರೆ, ಲಲಿತೆ ಅದಕ್ಕೊಪ್ಪಲಿಲ್ಲ.

" ಥೂ ಥೂ ! ಇಷ್ಟೊಂದು ದೊಡ್ಡದನ್ನು ಮೆಟ್ಟಿಕೊಂಡು ನೀನು ನಡೆದರೆ ಎಲ್ಲರೂ ನಗೋಲ್ಲವೇ ! " ಎಂದು ಹಾಸ್ಯ ಮಾಡಿದ ಕಿಟ್ಟಿ.

" ಚಿಂತೆಯಿಲ್ಲ, ನನಗೇನಂತೆ, ನಾನು ಹೇಗಾದರೂ ಹೋಗುತ್ತೇನೆ ? " ಎಂದು ಲಲಿತೆ. ಜಗಳ ಬೆಳೆಯಿತು. ಕಿಟ್ಟೀಗೆ ಅಪ್ಪನಿಂದ ನಾಲ್ಕೈದು ಏಟುಗಳು ಬಿತ್ತು.

\+ \+ \+

ಅದರ ಮರುದಿನ ಬೆಳಿಗ್ಗೆ ಮಾವ ರಾಮುವು ಮದರಾಸಿಗೆ ಹೊರಡುವುದರಲ್ಲಿದ್ದನು. ರಾತ್ರೆ ಊಟ ಮುಗಿದ ಬಳಿಕ ಅಮ್ಮ, ಮಾವ, ಅಪ್ಪ ಮೂವರೂ ನಡುಮನೆಯಲ್ಲಿ ಮಾತನಾಡುತ್ತ ಕುಳಿತಿದ್ದರು. ಕಿಟ್ಟಿಯೂ, ಲಲಿತೆಯೂ ಮಲಗಲು ಹೋದರು. ಅವರಿಬ್ಬರೂ ಹಗಲಿನಲ್ಲಿ ಅದೆಷ್ಟು ಜಗಳವಾಡಿದರೂ ರಾತ್ರಿಯಾದರೆ ಸ್ನೇಹವಾಗಿಬಿಡುತ್ತಿದ್ದರು ಕತ್ತಲೆಯೆಂದರೆ ಭಯ ಪಾಪ. ಒಬ್ಬರಿಗೊಬ್ಬರು ಜೊತೆ ! ಸಾಲದುದಕ್ಕೆ ಪಕ್ಕದ ಮನೆಯ ಪುಟ್ಟಜ್ಜಿಯು ದೆವ್ವದ ಕತೆ ಹೇಳಿ ಹೇಳಿ ಕತ್ತಲೆಯೆಂದರೆ ಮತ್ತಿಷ್ಟು ಭಯ ; ಅವರು ಪ್ರತ್ಯಕ್ಷವಾಗಿ ದೆವ್ವವನ್ನೇನೂ ಕಂಡಿಲ್ಲ. ಆದರೂ ಕೂಡ ಕತ್ತಲೆಯೆಂದರೆ ಭಯ ಅಮ್ಮನನ್ನು ಜೊತೆಗೆ ಬಾ ಎಂದು ಕರೆದರೆ ರೇಗುವಳು. ದೀಪವಿದ್ದರೆ ನಿದ್ರೆಬಾರದೆಂದು ದೀಪವನ್ನೂ ಆರಿಸಿ, ಹೊರಟು ಹೋಗುವಳು. ಅಣ್ಣತಂಗಿಯರಿಬ್ಬರೂ ಒಬ್ಬರನ್ನೊಬ್ಬರು ತಬ್ಬಿಕೊಂಡು ನಿದ್ರೆ ಮಾಡುವ ಪದ್ಧತಿ.

" ಅಕ್ಕಾ, ಇವರಿಬ್ಬರೂ ಹೀಗೆ ಜಗಳವಾಡುತ್ತಾರಲ್ಲಾ, ಕಿಟ್ಟಿಯನ್ನು ಸ್ವಲ್ಪ ದಿನ ನನ್ನೊಡನೆ ಕರೆದುಕೊಂಡು ಹೋಗಿ ಮಡಗಿಕೊಳ್ಳಲೇ ? "

" ಹಾಗೇ ಮಾಡು, ಅದೇ ಮತ್ತೆ ಸರಿ. ಏನೊಂದ್ರೇ ? ನೀವೇನನ್ನುತ್ತೀರಿ ? ಒಂದು ಹೊಟ್ಟೆಯಲ್ಲಿ ಹುಟ್ಟಿ, ಒಟ್ಟಾಗಿ ಬೆಳೆದು, ಹೀಗೆ ಜಗಳವಾಡೋದು ಬಹಳ ನಾಚಿಕೆಗೇಡಾಗಿದೆ ನನಗಂತೂ........"

" ಅದೇ ಸರಿ, ಕರೆದುಕೊಂಡು ಹೋಗು ರಾಮು, ಬೇಡವೆಂದವರಾರು ?"

ಈ ಸಂಭಾಷಣೆಯನ್ನು ಕೇಳಿ ಕಿಟ್ಟೀಗೂ, ಲಲಿತೆಗೂ ' ಜುಂ ' ಎಂದಿತು.

" ಕೇಳಿದೆಯೇನಣ್ಣಾ? ಮಾವ ನಿನ್ನನ್ನು ಕರೆದುಕೊಂಡು ಹೋಗುತ್ತಾರಂತೆ."

" ಅಯ್ಯೋ, ನಾನು ನಿನ್ನನ್ನು ಬಿಟ್ಟು ಹೋಗೋಲ್ಲಾ ಲಲಿತೂ. ಇನ್ನು ಮೇಲೆ ನಿನ್ನೊಡನೆ ನಾನು ಜಗಳವೇ ಆಡೋಲ್ಲಾ ಕಣೆ."

" ನಾನೂ ನಿನ್ನೊಡನೆ ಜಗಳವಾಡೋಲ್ಲ ಅಣ್ಣಾ."

" ಆದರೆ, ಬೆಳಗ್ಗೆ ಮಾವನೊಡನೆ ಹೇಳಿಬಿಡೋಣ. ನಾವಿಬ್ಬರೂ ಇನ್ನು ಮೇಲೆ ಜಗಳವೇ ಆಡೋಲ್ಲ. ನನ್ನನ್ನು ಊರಿಗೆ ಕರೆದುಕೊಂಡು ಹೋಗಬೇಡ" ವೆಂದು (ಪ್ ಪ್ಪೂ ! ಪ್ ಪ್ಪೂ !! ಪ್ ಪ್ಪೂ !!!).

ನಡುಮನೆಯಲ್ಲಿದ್ದವರಿಗೆ ಮಕ್ಕಳಿಬ್ಬರೂ ಮುದ್ದಿಟ್ಟುಕೊಳ್ಳುವುದು ಕೇಳಿ ಬಂತು.

—ಜ. ರಾ. ಶ್ರೀ.

—o—

ಬೆಂಗಳೂರಲ್ಲಿ ಈಗ ನೀರು ಮೊದಲಿಗಿಂತಲೂ ಶುದ್ಧವಾಗಿದೆಯಂತೆ. ದಯವಿಟ್ಟು ಯಾರಿಗೂ ತಿಳಿಸಬೇಡಿ. ಹಾಲಿನ ಬೆಲೆ ಹೆಚ್ಚಾದೀತು.

✦ ✦ ✦

ಖಾಲಿ ಉಡುಪು ಧರಿಸಿದ್ದವನೊಬ್ಬ ಪೋಲಿಸಿನವನೆಂದು ಹೇಳಿಕೊಂಡು ತಿರುಗುತ್ತಿದ್ದಾಗ ಅವನನ್ನು ಬಂಧಿಸಲಾಯಿತಂತೆ. ಅವನು ಎದೆ ಚಾಚಿಕೊಂಡು, ಸೊಂಟ ಎತ್ತಿಕೊಂಡು ನಡೆಯುತ್ತಿದ್ದುದೇ ಅನುಮಾನಕ್ಕೆ ಕಾರಣವಾಯಿತಂತೆ.

✦ ✦ ✦

ಹೋದವಾರ ನ್ಯಾಯಾಸ್ಥಾನದಲ್ಲಿ ಮೋಟಾರುಗಾರನೊಬ್ಬ ತಾನು ಒಬ್ಬನೇ ದಾರಿಗನನ್ನು ಒಂದೇ ವಾರದಲ್ಲಿ ಎರಡು ಸಲ ಬೀಳಿಸಿದ್ದುಂಟೆಂದು ಒಪ್ಪಿಕೊಂಡ. ಇದರಿಂದ ಮೋಟಾರು ನಡೆಸುವುದು ಚಮತ್ಕಾರದ ಕೆಲಸವೆಂದೇ ತಿಳಿಯುತ್ತದೆ.

✦ ✦ ✦

ಗಾಳಿ ಬಂದಾಗ ತೂರಿಕೋ !

"ಸೀನಾ ! ಇನ್ನೆರಡು ಬೆಣ್ಣೆ ತೆಗೆದುಕೊಂಡು ಬಾ !"

"ಇದೋ, ಬಂದೆ ಸ್ವಾಮಿ.......ಎರಡು ನಿಮಿಷ ಪುರಸತ್ತು ಕೊಡಿ !"

"ಸಾಧ್ಯವಿಲ್ಲ, ಸಾಧ್ಯವಿಲ್ಲ ! ಮೊದಲು ತಂದುಕೊಟ್ಟುಬಿಡು—ಸಾವಕಾಶವಾದರೆ ಮುಗಿದು ಹೋದೀತು !" ಬ್ರಹ್ಮೇಂದ್ರ ಭವನದ ಮೂರನೆಯ ಮಹಡಿಯಲ್ಲಿ ಸಡಗರವೋ ಸಡಗರ. ಎಂಟು ದಿವಸಗಳಿಂದ ಬೆಣ್ಣೆಯ ಮುಖವೇ ಕಾಣದಿದ್ದುದು ಈ ದಿನ ಬೆಣ್ಣೆ ಬಂದುಬಿಟ್ಟಿದ್ದಿತು. ಸರಿ, ಎಲ್ಲರೂ ಬೆಣ್ಣೆಯನ್ನು ಕೇಳುವವರೇ—ಖಾಲಿ ದೋಸೆಗೂ ಬೆಣ್ಣೆ, ಇಡ್ಲಿ ಸಾಂಬಾರಿಗೂ ಬೆಣ್ಣೆ, ಖಾರಾ ಖೂಂದಿಗೂ ಬೆಣ್ಣೆ, ಬಾಸುಂದಿ ಬಾದಾಮಿ ಹಾಲುಗಳಿಗಂತೂ ಎರಡೆರಡು ಬೆಣ್ಣೆ ! ಅದನ್ನು ಕಂಡರೆ ಅಸಹ್ಯಪಡುತ್ತಿದ್ದವರೂ ಕೂಡ ಸಿಕ್ಕಿದೆಯೆಂದು "ಒನ್ ಬೈ ಟು (one by two) ಖಾಲಿ ದೋಸೆ, ಮೂರು ಬೆಣ್ಣೆ !" ಎಂದು ಕೂಗಲಾರಂಭಿಸಿದ್ದರು. ಬ್ರಹ್ಮೇಂದ್ರಭವನದ ಮಾಲೀಕನು ಈ ಗಲಾಟೆಯಲ್ಲಿ ಬೆಣ್ಣೆಯ ಬೋಂಡಗಳ ಗಾತ್ರವನ್ನು ಅರ್ಧಕ್ಕಿಳಿಸಿ ಬೆಲೆಯನ್ನು ಎರಡರಷ್ಟು ಏರಿಸಿಬಿಟ್ಟನು. ಆದರೆ, ನಮ್ಮ ಮೂರನೆಯ ಮಹಡಿಯವರು ಇದಕ್ಕೆಲ್ಲಾ ಹೆದರುವವರೇ ಅಲ್ಲ.

"ನೋಡಿದೆಯಾ, ಭೀಮಣ್ಣ ! ಈ ಬೆಣ್ಣೆಯ ಭರಾಟೆ !" ಎಂದೆ. ಕುಳ್ಳಪ್ಪನು "ಸದ್ಯ ಸಿಕ್ಕಿದೆಯಲ್ಲ, ಅದು ಹೇಳಿ. ಎಂಟು ದಿನಗಳಿಂದ ಅದಕ್ಕಾಗಿ ಹಂಬಲಿಸಿದ್ದೂ ಹಂಬಲಿಸಿದ್ದೆ" ಎಂದನು.

"ಇನ್ನೇನು, ಹತ್ತು ವರ್ಷಗಳ ಒಳಗಿರುವ ಹಸುಗಳನ್ನು ಕೊಲ್ಲಕೂಡದೆಂಬ ಕಟ್ಟಾಜ್ಞೆ ಬಂದುಬಿಟ್ಟಿದೆಯಲ್ಲ, ಹಾಲು ಬೆಣ್ಣೆಗಳಿಗೇನು ಕಡಿಮೆ ?" ಎಂದು ಹಿಂದಿನಿಂದ ಯಾರೋ ಒದರಿದರು.

"ಹತ್ತು ವರ್ಷದ ಒಳಗಿನ ದನಗಳಿಗೇನು ಕಡಿಮೆ ಎಂದು ಹೇಳುವ ಹಾಗಿಲ್ಲ" ಎಂದು ಮತ್ತಾರೋ ಅಂದರು.

ಸದ್ದಿಲ್ಲದೆ ಬಾಸುಂದಿಗಳನ್ನು ಹೊಡೆಯುತ್ತಿದ್ದ ಗೋವಿಂದಸ್ವಾಮಿಯು "ಮುಂದೆ ಹೇಗಾದರೂ ಇರಲಿ, ಈಗ ಸಿಕ್ಕಿರುವಾಗ ಏಕೆ ಸಂಕೋಚಪಟ್ಟುಕೊಳ್ಳಬೇಕು ? ಗಾದೆ: ಗಾಳಿ ಬಂದಾಗ ತೂರಿಕೋ. ನೀತಿ: ಬೆಣ್ಣೆ ಸಿಕ್ಕಿದಾಗ ತಿಂದುಕೋ !" ಎಂದು ಹೇಳಿ ಮತ್ತೊಂದು ಲೋಟ ಬಾದಾಮಿ ಹಾಲು, ಎರಡಾಣೆ ಬೆಣ್ಣೆಗಳಿಗೆ ಹೇಳಿದನು.

ಭೀಮಣ್ಣನು "ಗಾಳಿ ಬಂದಾಗ ತೂರಿಕೊ ಎಂಬುದು ಸತ್ಯದ ಮಾತು. ನಮ್ಮ ದೊಡ್ಡಪ್ಪನ ಅಳಿಯನ ತಮ್ಮನ ಮಗ ಕಲ್ಲಪ್ಪನು ಈ ಗಾದೆಯನ್ನು ವೇದ

ವಾಕ್ಯವೆಂದು ನಂಬಿ ಅಕ್ಷರಶಃ ಅದರಂತೆ ನಡೆದುಕೊಂಡಿದ್ದರಿಂದಲೇ ಅಷ್ಟು ಉನ್ನತ ಸ್ಥಿತಿಗೆ ಬಂದದ್ದು......."

ಖಾಲಿದೋಸೆಯ ಕಪ್ಪಣ್ಣನು "ಈ ಜೆಣ್ಣೆಯಲ್ಲಿ ಒಂದು ವಿಶೇಷ ನೋಡಿದಿರಾ"—"ನಮ್ಮ ಕಲ್ಲಪ್ಪನ ಕಥೆ ಕೇಳಬೇಕಾದುದು—ಅವನು ಮುಂದಕ್ಕೆ ಬಂದ ಬಗೆ ಎಲ್ಲರಿಗೂ ಒಂದು ಮೇಲ್ಪಂಕ್ತಿ, ಎಂದರೇನು ಅತಿಶಯೋಕ್ತಿಯಲ್ಲ (ಎಂದು ಹೇಳತೊಡಗಿದನು ಭೀಮಣ್ಣ) ಅವನು ಹುಟ್ಟಿದುದು ಕೇವಲ ಬಡತನದಲ್ಲಿ. ಒಳ್ಳೆ ಮಳೆಗಾಲ; ಆಸರ್ತಿಯ ಬೇಸಗೆಯು ಬಹಳ ಉಗ್ರವಾಗಿದ್ದು ಜನರೆಲ್ಲರೂ ಮಳೆಗೋಸ್ಕರ ಹಾಹಾಕಾರಪಟ್ಟುಬಿಟ್ಟರು. ಮಳೆಯೂ ಬಂತು. ಬೇಸಾಯದ ಕೆಲಸವು ಭರದಿಂದ ಸಾಗಿತು ಇದ್ದಕ್ಕಿದ್ದ ಮಧ್ಯ ಮಳೆಗಾಲದಲ್ಲಿ ಮಳೆಯೇ ನಿಂತುಹೋಯಿತು. ಮೋಡಗಳೆಲ್ಲಾ ಚದರಿ ಸೂರ್ಯನ ತಾಪವು ಬೇಸಿಗೆಯ ಸಾಲ್ಕರಷ್ಟಾಯಿತು. ಪೈರೆಲ್ಲಾ ಒಣಗಿ ಹೋಯಿತು. ಎಲ್ಲರಿಗೂ ಆಶ್ಚರ್ಯ—ಕಾರಣವೇನಿರಬಹುದೆಂದು. ಕಂಡ ಕಂಡ ದೇವರಿಗೆಲ್ಲಾ ಮಾಸಲು ಕಟ್ಟಿದರು. ಏಕೆಂದರೆ ನಾಲ್ಕು ತಿಂಗಳು ಎಡಬಿಡದೆ ಒಂದೇ ಸಮನೆ ಹೊಯ್ಯುತ್ತಿದ್ದ ಮಧ್ಯ ಮಲೆನಾಡಿನಲ್ಲಿಯೂ ಸಹ ತುಂಬಿದ ಮಳೆಗಾಲದಲ್ಲಿ ಬೇಸಿಗೆಯ ಬಿಸಿಲು! ಕಡೆಗೆ ಕಾರಣವು ನಮ್ಮೂರಿನಲ್ಲಿ ಮಾತ್ರ ತಿಳಿಯಿತು—ಕಲ್ಲಪ್ಪನ ತಾಯಿಗೆ ಪ್ರಸವ ವೇದನೆಯು ಶುರುವಾಗಿದ್ದಿತು! ನಾಲ್ಕು ದಿನ ವೇದನೆಯನ್ನನುಭವಿಸಿ ಐವತ್ತು ಮೈಲಿ ಸುತ್ತಿನಲ್ಲಿದ್ದ ವೈದ್ಯರು, ಸೂಲಗಿತ್ತಿಯರಿಗೆಲ್ಲಾ ಕಳವಳಪಡಿಸಿ, ಕಡೆಗೆ ಅರ್ಧ ಪ್ರಾಣ ಕೊಟ್ಟು ಆಕೆಯು ಈ ಸುಪುತ್ರನನ್ನು ಪಡೆದಳು. ಅವನು ಹುಟ್ಟಿದ ದಿನ ಅಗಾಧವಾದ ಮಿಂಚು, ಗುಡುಗು, ಭಾರಿ ಸಿಡಿಲು ಹೊಡೆದು ವರ್ಷಾಂತರಗಳಿಂದ ಇದ್ದ ಒಂದು ಅಶ್ವತ್ಥ ಮರವೂ ಅದರ ನೆರಳಿನಲ್ಲಿ ನಿಂತಿದ್ದ ಇಬ್ಬರು ಬ್ರಾಹ್ಮಣರೂ ಸುಟ್ಟು ಬೂದಿಯಾದರು!

ತಾಯಿಗೆ ಅಷ್ಟು ಕಷ್ಟವಾದರೂ ಮಗುವೇನೋ ಕಲ್ಲುಗುಂಡಿನ ಹಾಗೆ ಚೆನ್ನಾಗಿಯೇ ಇತ್ತು. ಆದರಿಂದಲೇ ಹಾಗೆಯೇ ಎಲ್ಲಾದರೂ ಕಲ್ಲುಗುಂಡಿನ ಹಾಗೆ ಬದುಕಿಕೊಳ್ಳಲಿ ಎಂದು, ಕಲ್ಲಪ್ಪ ಎಂದು ನಾಮಕರಣ ಮಾಡಿದರು. ಯಥಾಪ್ರಕಾರ ಜೋಯಿಸರನ್ನು ಕರೆಯಿಸಿ ಜಾತಕ ಬರೆಸಿದರು. ನಮ್ಮ ಶುಂಠಯ್ಯನ ಜಾತಕದಂತೆಯೇ (ನಮ್ಮ ಶುಂಠಯ್ಯನ ಕಥೆ ನಿಮಗೆ ಜ್ಞಾಪಕವಿರಬಹುದು—ಆ ದಿವಸ ಹೇಳಿದೆನಲ್ಲಾ, ಹಲ್ಲು ಚುಚ್ಚುವ ಕಡ್ಡಿ ಮಾರಿ ಹಣವಂತನಾದ ಶೂರ) ಇವನದೂ ಬಹಳ ಅಸಾಧಾರಣವಾದ ಜಾತಕವೆಂತಲೂ, ಚಂದ್ರಾದಿಯೋಗದ ದೆಸೆಯಿಂದ ಬಹಳ ದೊಡ್ಡ ಪದವಿಗೆ ಬರತಕ್ಕವನೆಂತಲೂ ಹೇಳಿದರು ಆದರೇನೋ ಜೋಯಿಸರು ಗುಟ್ಟಾಗಿ ತಮ್ಮ ಮನೆಯಲ್ಲಿ ಇವನಿಗೆ ಕಾರಾಗೃಹವಾಸವೂ ಇದೆ ಎಂದು ಅವರ ಹೆಂಗಸರ ಸಂಗಡ ಹೇಳಿದರಂತೆ. ಆದರ ನಿಜಾರ್ಥ ನನಗೆ ತಿಳಿಯದು.

ಕಲ್ಲಪ್ಪನು ಕವಿಗಳು ಹೇಳುವಂತೆ ಬಾಲಚಂದ್ರನೋಪಾದಿಯಲ್ಲಿ ಬೆಳೆಯುತ್ತಾ ಬಂದನು. ಆದರೆ ಹಾಲಿನಂಥ ಬಿಳಿಚಂದ್ರನ ಸ್ಥಳದಲ್ಲಿ ಸ್ವಲ್ಪ ಮಾಸಲು ಚಂದ್ರ

ನನ್ನು ನೀವು ಊಹಿಸಿಕೊಳ್ಳಬೇಕು ಅಷ್ಟೆ. ಅವನ ಹೊರವಾದ ಬೆಳವಣಿಗೆಯನ್ನು ಕಂಡು ಅವನ ಒಡನಾಡಿಗಳೆಲ್ಲಾ ಪ್ರೀತಿಯಿಂದ "ಹೆಂಟೆಗೊದ್ದ" ಎಂದು ಹೆಸರಿಟ್ಟಿರು. ಒಂದು ದಿನ ಇವನಿಗೆ ನಾಲ್ಕೈದು ವರ್ಷ ವಯಸ್ಸಾದಾಗ, ರೈತರು ಮೆದೆ ತುಳಿಸಿ ಪೈರನ್ನು ತೂರುತ್ತಿದ್ದುದನ್ನು ಕಂಡು ಅವನು ಅವರ ಅಪ್ಪನನ್ನು ಇದೇಕೆ ಹೀಗೆ ಮಾಡುತ್ತಿದ್ದಾರೆಂದು ಕೇಳಿದನು. ಅವರ ತಂದೆಯು ಅದರ ವಿಚಾರವನ್ನೆಲ್ಲಾ ತಿಳಿಸಿ "ನೋಡು, ಈಗಾಗಲೇ ರಾತ್ರಿ ಸಮಯವಾಗಿದೆ. ಆದರೂ ಈಗತಾನೆ ಗಾಳಿ ಎದ್ದಿರುವುದರಿಂದ ಕತ್ತಲಾಗುವ ಹಾಗಿದ್ದರೂ, ಈಗಲೇ ತೂರುತ್ತಿದಾರೆ. ಗಾಳಿ ಬಂದಾಗ ತೂರಿಕೋ ಬೇಕಪ್ಪಾ" ಎಂದನು. ಬಾಲಕನಾದ ಕಲ್ಲಪ್ಪನಿಗೆ ಇದು ಮನಸ್ಸಿನಲ್ಲಿ ಬಲವಾಗಿ ನಾಟಿತು.

ಮಾರನೆಯ ದಿನ ದೇವರ ನೈವೇದ್ಯಕ್ಕೆಂದು ಅವರ ತಾಯಿಯು ಹಣ್ಣುಕಾಯಿಗಳನ್ನು ತರಿಸಿ ದೇವರ ಮುಂದಿಟ್ಟು ಸ್ನಾನಕ್ಕೆಂದು ಹೋದಳು. ಯಾವಾಗಲೂ ಎತ್ತರವಾದ ಬಡುವಿನ ಮೇಲಿರುತ್ತಿದ್ದ ತುಪ್ಪದ ಪಾತ್ರೆಯೂ, ಸಕ್ಕರೆ ಡಬ್ಬಿಯೂ ಕೆಳಗಿಡಲ್ಪಟ್ಟಿದ್ದುವು. ಕಲ್ಲಪ್ಪನು ನೋಡಿದನು. ಒಳ್ಳೆಯ ಸಮಯ! ರಸವತ್ತಾದ ಹಣ್ಣನ್ನು ಸುಲಿದು ಸಕ್ಕರೆ ತುಪ್ಪಗಳಲ್ಲಿ ಅದ್ದಿ ನುಂಗಿದನು. ಕಾಯಿಯನ್ನು ಒಡೆದು ಎಳನೀರು ಕುಡಿದು. ಅದರ ಮೇಲೆ ಕಾಯಿ ಚೂರುಗಳನ್ನು ಅಗಿದನು. ತಾಯಿಯು ಬರುವವೇಳೆಗೆ ಸಿಪ್ಪೆ, ಚಿಪ್ಪು ಇವುಗಳು ಮಾತ್ರ ಉಳಿದಿದ್ದವು. ಅವಳು "ಇದೇನೋ ಮಗು, ಹೀಗೆ ಮಾಡಿದೆ? ದೇವರಿಗೆಂದು ತರಿಸಿದ್ದೆನಲ್ಲೋ!" ಎಂದಳು.

ಕಲ್ಲಪ್ಪನು "ನೈವೇದ್ಯವಾದ ಮೇಲೆ ಬರೀ ಹಣ್ಣುಮಾತ್ರ ಸ್ವಲ್ಪ ಸಿಕ್ಕುತ್ತಿತ್ತು." ಈಗ ಸಕ್ಕರೆ, ತುಪ್ಪ, ಕಾಯಿ, ಹಣ್ಣು ಎಲ್ಲಾ ಒಟ್ಟಿಗೆ ಇತ್ತು. ಅಪ್ಪ ಹೇಳಿಕೊಟ್ಟಿದಾನೆ—"ಗಾಳಿ ಬಂದಾಗ ತೂರಿಕೊ" ಎಂದು. ಆದ್ದರಿಂದ ಎಲ್ಲಾ ಒಟ್ಟಿಗೆ ಸಿಕ್ಕಿದಾಗ ಹೊಟ್ಟೆ ತುಂಬಿಕೊಂಡೆ" ಎಂದನು.

ಇವನ ಗ್ರಾಹ್ಯ ಶಕ್ತಿಯನ್ನು ಕಂಡು ಎಲ್ಲರಿಗೂ ಅತ್ಯಂತ ಆಶ್ಚರ್ಯವಾಯಿತು. ದೊಡ್ಡ ಓದನ್ನೇ ಓದಿಸಬೇಕೆಂದು ಶಾಲೆಗೆ ಹಾಕಿದರು. ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಗಣಿತದ ಪ್ರಶ್ನೆಗಳು ಎಷ್ಟು ತಲೆ ಕೆರೆದುಕೊಂಡರೂ ಬಗೆಹರಿಯಲಿಲ್ಲ. ಸುಮ್ಮನೆ ಕುಳಿತಿದ್ದು ಇನ್ನೇನು ಎದ್ದು ಬರಬೇಕೆಂದಿದ್ದನು. ಅಷ್ಟರಲ್ಲಿ ಇದ್ದಕ್ಕಿದ್ದ ಹಾಗೆ ದೊಡ್ಡ ಗಾಳಿ ಎದ್ದಿತು. ಮೇಜಿನ ಮೇಲೆ ಬರೆದು ಮುಗಿಸಿಕೊಟ್ಟಿದ್ದ ವಿದ್ಯಾರ್ಥಿಗಳ ಉತ್ತರದ ಕಾಗದಗಳೆಲ್ಲಾ ಇದ್ದುವು. ಮೇಲೆ ಭಾರ ಯಾವುದೂ ಇರಲಿಲ್ಲವಾದ್ದರಿಂದ ಆ ಕಾಗದಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಆ ದೊಡ್ಡ ಕೊಠಡಿಯ ಮೂಲೆ ಮೂಲೆಗೂ ಹರಡಿದವು. ಅಲ್ಲಿದ್ದ ಉಪಾಧ್ಯಾಯರುಗಳು ಅವುಗಳನ್ನು ಬೇಟೆಯಾಡತೊಡಗಿದರು. ಕಲ್ಲಪ್ಪನು ಕುಳಿತಿದ್ದ ಬಳಿಗೂ ಕೆಲವು ಕಾಗದಗಳು ಹಾರಿಬಂದವು. ಕಲ್ಲಪ್ಪನು ನೋಡಿದನು. ನಾಲ್ಕು ಲೆಕ್ಕಗಳ ಉತ್ತರ ಸಿಕ್ಕಿತು. ಕಾಗದಗಳನ್ನು ತನ್ನ ಉತ್ತರಗಳೊಡನೆ ಸೇರಿಸಿದನು. ಉಪಾಧ್ಯಾಯರುಗಳು

ಸಿಕ್ಕಿದ ಕಾಗದಗಳನ್ನೆಲ್ಲಾ ಶೇಖರಿಸಿ ಪಿಂಗಡಿಸಿಕೊಂಡರು. ಅದಾದ ಮೇಲೆ ಕಲ್ಲಪ್ಪನು ತನ್ನ ಉತ್ತರದ ಕಾಗದಗಳನ್ನು ಕೊಟ್ಟು ಹೊರಗೆ ಬಂದನು. ಗಾಳಿ ಬಂದು ಉತ್ತರಗಳು ತಮ್ಮಷ್ಟಕ್ಕೆ ತಾನೇ ಕಲ್ಲಪ್ಪನಿಗಾಗಿ ತೂರಿಕೊಂಡಿದ್ದವು— ಕೇರ್ಗಡೆಯೇ ಆಗಿಹೋಯಿತು.

ಮೆಟ್ರಿಕ್ ಪರೀಕ್ಷೆಯಲ್ಲಿ ಆದ ವಿಚಿತ್ರವೇ ಬೇರೆ. ವಿಜ್ಞಾನ ಶಾಸ್ತ್ರದಲ್ಲಿ ಒಂದೇ ಹಾಳೆ ಬರೆದು ಮಿಕ್ಕಿದ್ದೆಲ್ಲಾ ಖಾಲಿ ಕೊಡಬೇಕಾಯಿತು. ಹೀಗಿದ್ದರೂ ಪ್ರಯೋಜನವಿಲ್ಲವೆಂದರಿತು ತನ್ನ ಅಂಕಿಯನ್ನು ಉತ್ತರದ ಪುಸ್ತಕದ ಮೇಲೆ ಬರಿಯದೆಯೇ ಹೊರಗೆ ಬಂದನು. ಅಲ್ಲಿಯೇ ನಿಂತು ಕೆಲವರ ಸಂಗಡ ಮಾತನಾಡುತ್ತಿದ್ದಾಗ ಒಳಗಿಂದ ಪರೀಕ್ಷೆಯ ಉಸ್ತುವಾರಿಯಲ್ಲಿದ್ದವರು ಹೊರಗೆ ಬಂದು "ಯಾರೋ ಇಬ್ಬರು ವಿದ್ಯಾರ್ಥಿಗಳು ತಮ್ಮ ಅಂಕಿಗಳನ್ನು ಉತ್ತರದ ಪುಸ್ತಕಗಳ ಮೇಲೆ ಬರೆಯಲು ಮರೆತಿದ್ದಾರೆ; ಕೂಡಲೇ ಬಂದು ಅದನ್ನು ಸರಿಪಡಿಸಬೇಕು" ಎಂದರು. ಕಲ್ಲಪ್ಪನು "ನಾನು ಬರೆದ ಹಾಗೆ ಜ್ಞಾಪಕವಿಲ್ಲ ಬಂದು ನೋಡಲೇ" ಎಂದನು.

"ನಿನ್ನ ಅಂಕಿ ಎಷ್ಟು?"

"೫೩೩"

"ಹೌದು, ಅದು ಒಂದು. ಇನ್ನೊಬ್ಬನು ಯಾರು?"

"೫೦ಳನೆಯ ಅಂಕಿಯವನು ಇದ್ದಾನೆಯೆ?"

ಮತ್ಯಾರೂ ಮುಂದೆ ಬರಲಿಲ್ಲ. ಅವನು ಮನೆಗೆ ಹೊರಟುಹೋಗಿದ್ದನು. ಕಲ್ಲಪ್ಪನನ್ನು "ಹೋಗಲಿ, ನೀನು ಬಂದು ನಿನ್ನ ಉತ್ತರದ ಮೇಲೆ ನಿನ್ನ ಅಂಕಿಯನ್ನು ಗುರುತಿಸು" ಎಂದರು. ಕಲ್ಲಪ್ಪನಿಗೆ ತಂಗಾಳಿ ಬೀಸಿದಂತಾಯಿತು. ಹೋಗಿ ನೋಡಿದನು. ತನ್ನ ಉತ್ತರದ ಪುಸ್ತಕದಲ್ಲಿ ಒಂದೇ ಹಾಳೆ ಬರೆದಿದ್ದನು. ಮತ್ತೊಂದರಲ್ಲಿ ಎಲ್ಲಾ ಪ್ರಶ್ನೆಗಳ ಉತ್ತರವೂ ಇದ್ದಿತು. ಕಲ್ಲಪ್ಪನು ಸ್ವಲ್ಪವಾದರೂ ಹಿಂತೆಗೆಯದೆ "ಇದೇ ನನ್ನ ಉತ್ತರದ ಪುಸ್ತಕ" ಎಂದು ಎರಡನೆಯ ಪುಸ್ತಕದ ಮೇಲೆ ತನ್ನ ಅಂಕಿಯನ್ನು ಜೋಪಾನವಾಗಿ ಮುತ್ತಿನಂಥಾ ಬರವಣಿಗೆಯಲ್ಲಿ ಬರೆದನು. ಮೆಟ್ರಿಕ್‌ನಲ್ಲಿ ತೂರಿಕೊಂಡನು!

ಇಂಟರ್ ಪರೀಕ್ಷೆಯದೇನೂ ಹೇಳಬೇಕಾದ ಅಂತಹ ಹೆಚ್ಚಿನ ವಿಷಯವಲ್ಲ. ಉಸ್ತುವಾರಿಯಲ್ಲಿದ್ದವರ ಬೆನ್ನು ಕಲ್ಲಪ್ಪನ ಕಡೆ ತಿರುಗಿದಾಗಲೆಲ್ಲ ಸ್ವಲ್ಪ ಸ್ವಲ್ಪ ಗಾಳಿ ಬೀಸಿದ ಹಾಗೆ ಆಗುತ್ತಿತ್ತು. ಮನೆಯಿಂದ ಬರೆದುಕೊಂಡು ಹೋಗಿದ್ದ ಒಂದು ಕಾಗದವನ್ನು ಮೆಲ್ಲಮೆಲ್ಲಗೆ ನೋಡಿ ಉತ್ತರಗಳನ್ನು ತೂರಿ ತೇರ್ಗಡೆ ಹೊಂದಿದನು.

ಬಿ. ಎ. ಪರೀಕ್ಷೆಗೆ ಕೂತಾಗ ಬೀಸಿದ ಗಾಳಿಯೇ ಬೇರೆ ರೀತಿಯದು. ಪರೀಕ್ಷೆಗೆ ಎಂಟು ದಿನಗಳಿಗೆ ಮುಂಚಿತವಾಗಿ ಯಾವುದೋ ಪುಸ್ತಕ ಬೇಕೆಂದು ತನ್ನ ಪ್ರೊಫೆಸ

ರವರ ಕೊಠಡಿಗೆ ಹೋದನು. ಅವರು ಬರುವುದು ಎರಡು ನಿಮಿಷ ತಾವಕಾಶವಾದ್ದರಿಂದ ಅಲ್ಲಿಯೇ ಕೂತು ಮೇಜಿನಮೇಲಿದ್ದ ಕಾಗದಗಳನ್ನೆಲ್ಲಾ ತಿರುವಿ ಹಾಕತೊಡಗಿದನು. ಒತ್ತುವ ಕಾಗದದ ಕಟ್ಟಿನ ಕೆಳಗೆ ಯಾವುದೋ ಒಂದು ಕಾಗದವು ಕಂಡು ಬಂದಿತು. ನೋಡಿದನು, ಕೆಲವು ಪ್ರಶ್ನೆಗಳು ಬರೆಯಲ್ಪಟ್ಟಿದ್ದವು. ಒಡನೆಯೇ ಜ್ಞಾಪಕಕ್ಕೆ ಬಂದಿತು. ಈ ಪ್ರೊಫೆಸರವರೂ ತನ್ನ ಒಬ್ಬ ಪರೀಕ್ಷಕರೆಂದು. ತಕ್ಷಣ ಬೇರೆಯೊಂದು ಕಾಗದದಲ್ಲಿ ಅವೆಲ್ಲವನ್ನೂ ಗುರುತಿಸಿಕೊಂಡನು. ಪ್ರೊಫೆಸರು ಬರುವ ವೇಳೆಗೆ ಎಲ್ಲಾ ಯಥಾಸ್ಥಿತಿ. ತನಗೆ ಬೇಕಾದ ಪುಸ್ತಕವನ್ನು ಕೇಳಿ ತೆಗೆದುಕೊಂಡು ಏನೂ ತಿಳಿಯದ ಹಸುಕೂಸಿನಂತೆ ಹೊರಗೆಬಂದನು. ಆ ಸಲ ಬಿ.ಎ. ಪರೀಕ್ಷೆಯಲ್ಲಿ ಕಲ್ಲಪ್ಪನಿಗೆ ಒಂದು ಭಾಗದಲ್ಲಿ ಫಸ್ಟ್‌ಕ್ಲಾಸ್! ಮತ್ತೊಂದು ಭಾಗದಲ್ಲಿ—ಒಂದು ಹಾಳೆ ಅಲುಗಾಡುವಷ್ಟು ಗಾಳಿಯೂ ಕೂಡ ಬೀಸಿರಲಿಲ್ಲ!

ನಾಲ್ಕು ಸಲ ಪ್ರಯತ್ನಪಟ್ಟು ಕಡೆಗೆ ಎರಡನೆಯ ಭಾಗವನ್ನು ಮುಗಿಸಿದನು. ಮುಂದಕ್ಕೇನು ಮಾಡಬೇಕೆಂಬ ದೊಡ್ಡ ಸಮಸ್ಯೆ. ಕಡೆಗೆ ಇವನ ಬುದ್ಧಿ ವಿಚಕ್ಷಣೆ ಸಿಕ್ಕ ಸುಸಮಯಗಳನ್ನು ಸಮಂಜಸವಾಗಿ ಉಪಯೋಗಿಸುವ ಚಾತುರ್ಯ ಇವನ್ನೆಲ್ಲಾ ಪರ್ಯಾಲೋಚಿಸಿ ಎಲ್ಲರೂ ಇವನು ಲಾಯರಾಗಬೇಕೆಂದು ನಿರ್ಧರಿಸಿದರು.

ಅದೇ ಪ್ರಕಾರ ಲಾಯರು ಪರೀಕ್ಷೆಗಳಿಗೆ ಕೂತನು. ಮೊದಮೊದಲು ಸನ್ನಿವೇಶಗಳು ಸಮರ್ಪಕವಾಗಿ ಸಿಕ್ಕಲಿಲ್ಲವಾಗಿ ಹಲವಾರು ಸಲ ಮತ್ತೆ ಮತ್ತೆ ಓದಬೇಕಾಯಿತು. ಅದರೇನು? ಕಲ್ಲಪ್ಪನು ಎದೆಗುಂದುವ ಹೇಡಿಯಾಗಿರಲಿಲ್ಲ. ಬಹಳ ಸಾಹಸಪಟ್ಟು ಪ್ರಶ್ನೆಪತ್ರಿಕೆಗಳು ಅಚ್ಚಾಗುವ ಮುದ್ರಣಾಲಯದಲ್ಲಿ ಕೆಲಸಮಾಡುವವರೊಬ್ಬರ ಗುರುತುಮಾಡಿಕೊಂಡು ಲಾಯರು ಪರೀಕ್ಷೆಯನ್ನು ಮುಗಿಸಿಯೇಬಿಟ್ಟನು. ಇದರಿಂದ ಅವನಿಗೆ ಗಾಳಿ ಬಂದಾಗ ತೂರಿಕೊಳ್ಳುವ ಬುದ್ಧಿವಂತಿಕೆಯೊಂದೇ ಅಲ್ಲದೆ, ತನಗೆ ಬೇಕಾದ ಹಾಗೆ ಗಾಳಿಯನ್ನುಂಟುಮಾಡಿಕೊಳ್ಳುವ ಸಾಮರ್ಥ್ಯವೂ ಇದ್ದಿತೆಂದು ವ್ಯಕ್ತವಾಗುವುದು.

ಲಾಯರ್ ಕೆಲಸ ಪ್ರಾರಂಭಮಾಡಿದ ಮೂರು ತಿಂಗಳಲ್ಲಿಯೇ ಭಾರಿ ಮೊಖದ್ದಮೆಯೊಂದನ್ನು ಹಿಡಿದನು. ಕೆಳಗಿನ ಕೋರ್ಟಿನಲ್ಲಿ ಇವನ ಪರವೇ ಆಯಿತು. ಮೇಲಿನ ಕೋರ್ಟಿನಲ್ಲಿ ವಿರುದ್ಧವಾಯಿತು. ಅಪೀಲಿಗೆ ಹೋಯಿತು. ಸೂಚನೆಗಳು ಕಲ್ಲಪ್ಪನಿಗೆ ಹಿತಕರವಾಗಿ ಕಾಣಲಿಲ್ಲ. ಮೊಕದ್ದಮೆ ಇತ್ಯರ್ಥಕ್ಕೆ ಬರುವ ವೇಳೆಗೆ ಪ್ರತಿಕಕ್ಷಿಯ ಪರ ಲಾಯರು ಖಾಯಿಲೆ ಬಿದ್ದರು. ಸಮಯವು ಚೆನ್ನಾಗಿ ಒದಗಿತು. ತನಗೆ ಸಲ್ಲಬೇಕಾದ ಫೀಸು ಸರಿಯಾಗಿ ಬರಲಿಲ್ಲವೆಂದು ತನ್ನ ಕಕ್ಷಿಗಾರರೊಂದಿಗೆ ಜಗಳ ಹೂಡಿ ಅವರನ್ನು ಕೈಬಿಟ್ಟನು. ಪ್ರತಿಕಕ್ಷಿಗಳನ್ನು ಗುಟ್ಟಾಗಿ ಕರೆಸಿ ಎಲ್ಲವನ್ನೂ ನಿಮ್ಮ ಕಡೆಗೆ ಮಾಡಿಕೊಡುವೆನೆಂದು ಅವರ ಕಡೆ ಲಾಯರಾಗಿ ನಿಂತನು. ಅಪೀಲಿನ ಇತ್ಯರ್ಥವು ತನ್ನಷ್ಟಕ್ಕೆ ತಾನೇ ಇವರ ಕಡೆಯಾಯಿತು. ಕಲ್ಲಪ್ಪನಿಗೆ ಗಿಟ್ಟಿತು—ಎರಡು ಸಾವಿರ ರೂಪಾಯಿಗಳು. ಎಲ್ಲರೂ ಅವನ ಚಾಕಚಕ್ಯತೆಯನ್ನು ಕಂಡು ಬೆರಗಾದರು.

ಕಲ್ಲಪ್ಪನು ಹೀಗೆಯೇ ಪ್ರವರ್ಧಮಾನಕ್ಕೆ ಬಂದನು. ಕಾಲಕ್ರಮೇಣ ಅನೇಕ ಸಂಸ್ಥೆಗಳನ್ನು ನಡೆಸಬೇಕಾದ ಜವಾಬ್ದಾರಿಯೂ ಇವನಿಗೆ ವಹಿಸಲ್ಪಟ್ಟಿತು. ಸರಿ, ಕೇಳಬೇಕೆ? ಒಂದು ಬರೆಯುವ ಕಡೆ ಮೂರು ಬರೆದು, ನಾಲ್ಕು ಕೊಡುವ ಕಡೆ ಎರಡೇ ಕೊಟ್ಟು ತಾನು ಬಿಡುವ ಉಸಿರಿನ ಗಾಳಿಯಲ್ಲಿಯೂ ಸಹ ತನಗೆ ಅನುಕೂಲವಾಗುವಂತೆ ತೂರಿಕೊಳ್ಳುವುದರಲ್ಲಿ ನಿಸ್ಸೀಮನಾದನು. ಅವನ ದಕ್ಷತೆಯನ್ನು ಕೇಳಿ ಭಾರಿ ಜಮೀನ್‌ದಾರನೊಬ್ಬನು ಅವನನ್ನು ತನ್ನ ಸಲಹೆಗಾರನನ್ನಾಗಿ ನೇಮಿಸಿಕೊಂಡನು. ಕಲ್ಲಪ್ಪನಾದರೋ ಅಚ್ಚುಮೆಚ್ಚಾದ ನಡೆವಳಿಕೆಗಳಿಂದ ಜಮೀನ್‌ದಾರನ ಸಂಪೂರ್ಣ ಆದರಕ್ಕೆ ಪಾತ್ರನಾದನು.

ಹೀಗಿರುವಲ್ಲಿ ಜಮೀನ್‌ದಾರನಿಗೆ ಒಂದು ಗಂಡು ಮಗು ಹುಟ್ಟಿತು. ಅನೇಕ ವರ್ಷಗಳ ಮೇಲೆ ಪುತ್ರೋತ್ಸವವಾದ ಸಂತೋಷಾರ್ಥವಾಗಿ ಜಮೀನ್‌ದಾರನು ತನ್ನ ಜಹಗೀರಿಯಲ್ಲಿದ್ದ ಬಡಬೇಸಾಯಗಾರರಿಗೆಲ್ಲಾ ಸ್ವಲ್ಪ ಸ್ವಲ್ಪ ಜಮೀನನ್ನು ದಾನವಾಗಿ ಕೊಡಬೇಕೆಂದು ನಿಶ್ಚಯಿಸಿ ಈ ಕೆಲಸವನ್ನು ಕಲ್ಲಪ್ಪನಿಗೇ ಒಪ್ಪಿಸಿದನು. ಕಲ್ಲಪ್ಪನಿಗೆ ಒಳ್ಳೆಯ ಹುಲಯುಮಾದತವೆ ಬೇಸಿದಂತಾಯಿತು. ಅರ್ಧ ಜಹಗೀರಿಯನ್ನೆಲ್ಲಾ ದಾನವಾಗಿ ಹಂಚಿ ಖ್ಯಾತಿ ಪಡೆದನು.........

ಭೀಮಣ್ಣನು ಕಥೆಯನ್ನು ಇಲ್ಲಿಗೆ ನಿಲ್ಲಿಸಿ ಅನ್ಯಮನಸ್ಕನಾಗಿ ಏನನ್ನೋ ಯೋಚಿಸುತ್ತ ಕುಳಿತನು ಕುಳ್ಳಪ್ಪನು "ಹಾಗಾದರೆ, ಜೋಯಿಸರು ಅವನ ಜಾತಕದ ವಿಷಯವಾಗಿ ತಮ್ಮ ಮನೆಯಲ್ಲಿ ಹೇಳಿದ ಮಾತು ಸುಳ್ಳಾಯಿತು?" ಎಂದನು.

ಭೀಮಣ್ಣನು ಒಂದು ನಿಮಿಷ ಸುಮ್ಮನಿದ್ದು "ಇಲ್ಲ" ಎಂದನು. ಎಲ್ಲರೂ "ಏಕೆ? ಏನಾಯಿತು?" ಎಂದು ಕುತೂಹಲದಿಂದ ಕೇಳಿದೆವು. ಭೀಮಣ್ಣನು ಹೀಗೆಂದು ಹೇಳಿದನು. "ಅರ್ಧ ಜಹಗೀರಿಯನ್ನೇನೋ ಹಂಚಿಬಿಟ್ಟನು. ಆದರೆ, ಎಂತಹ ಸತ್ಯವಂತರಿಗೂ ಈ ಪ್ರಪಂಚದಲ್ಲಿ ಹಗೆಗಳಿರುವರಷ್ಟೆ. ಕಲ್ಲಪ್ಪನಿಗೂ ಆಗದ ಕೆಲವರಿದ್ದರು. ಅವರು ಜಮೀನ್‌ದಾರನ ಬಳಿ ಹೋಗಿ ಕಲ್ಲಪ್ಪನು ದಾನ ಕೊಡುವ ನೆಪದಲ್ಲಿ ಅಷ್ಟು ಜಮೀನನ್ನೂ ತಾನೇ ಹೊಡೆದುಬಿಡುವನೆಂದು ಚಾಡಿ ಹೇಳಿ, ಹೀಗೆಯೇ ಬಿಟ್ಟರೆ ಪೂರ್ತಿ ಜಮೀನ್‌ದಾರಿಯನ್ನೇ ನುಂಗಿಬಿಡುವನೆಂದು ಹೆದರಿಸಿದರು. ಜಮೀನ್‌ದಾರನು ಇದನ್ನು ನಂಬುವುದಕ್ಕಿಷ್ಟಪಡದಿದ್ದರೂ ನೋಡೋಣವೆಂದು ರಹಸ್ಯವಾಗಿ ವಿಚಾರಿಸತೊಡಗಿದನು ಜಮೀನೆಲ್ಲವೂ ಕಲ್ಲಪ್ಪನ ಅಪ್ಪ, ಅಣ್ಣ, ತಮ್ಮ, ಸೋದರಳಿಯ, ಭಾವಮೈದ ಇವರುಗಳ ಹೆಸರಿಗೇ ಬರೆಯಿಸಲ್ಪಟ್ಟಿದ್ದವು! ಜಮೀನ್‌ದಾರನಿಗೆ ಸಂಶಯವುಂಟಾಗಿ ಇವನ ಆಡಳಿತಕ್ಕೆ ಕೊಡಲ್ಪಟ್ಟಿದ್ದ ಲೆಕ್ಕ ಪತ್ರಗಳನ್ನೆಲ್ಲಾ ಶೋಧಿಸಿದನು. ಈಗ ನಂಬಿಕೆ ದ್ರೋಹದ ಅಪಾದನೆ ಮೇಲೆ ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ದಾಖಲಾಗಿದೆ. ತಪ್ಪಿಸಿಕೊಂಡು ಹೋಗಲು ಯತ್ನಿಸಿದ್ದರಿಂದ ಅವನನ್ನು ಹಿಡಿದು ಬಂಧನದಲ್ಲಿಟ್ಟಿದ್ದಾರೆ........

ಅಂತೂ ಬಹು ಬುದ್ಧಿಶಾಲಿ ನಮ್ಮ ಕಲ್ಲಪ್ಪ, ಆದರೆ, ಕಡೆಯುಸಲ ಗಾಳಿ ಯಾವ ದಿಕ್ಕಿಗೆ ಬೀಸುತ್ತಿದೆಯೆಂಬುದನ್ನು ಲೆಕ್ಕಿಸದೆ ಕೆಲಸಮಾಡಿದನು, ಅಷ್ಟೆ........

ಭೀಮಣ್ಣನು ಮುಗಿಸಿದ ಮೇಲೆ ಸ್ವಲ್ಪ ಹೊತ್ತು ಯಾರೂ ಮಾತಾಡಲಿಲ್ಲ. ಕಡೆಗೆ ಕಪ್ಪಣ್ಣನು "ಬೆಣ್ಣೆಗೂ ಇದಕ್ಕೂ ಏನು ಸಂಬಂಧ ?" ಎಂದನು.

ಭೀಮಣ್ಣನು "ಏನೂ ಇಲ್ಲ, ಬೆಣ್ಣೆ ಸಿಕ್ಕಿದಾಗ ತಿಂದುಕೊ ಎಂದು ಯಾರೋ ನೀತಿ ಹೇಳಿದರಷ್ಟೆ. ಅಗತ್ಯವಾಗಿ ತಿಂದುಕೊ. ಆದರೆ, ಅಜೀರ್ಣವಾಗದಂತೆ ನೋಡಿಕೊ, ಅಷ್ಟೆ !"

ಎಲ್ಲರೂ ತಿನ್ನುತ್ತಿದ್ದುದನ್ನು ಅಲ್ಲಲ್ಲಿಗೇ ಬಿಟ್ಟು ಎದ್ದೆವು.

—ಬೀರಣ್ಣ.

ಹಾರೇ ರಾಮ್—ಹಾರೇ ರಾಮ್

ಮನೆಗೆ ಶನಿವಾರ ಹಿಂತಿರುಗಿ ಬರುವಾಗ ಒಂದು ಭಜನೆ ಮಂದಿರದೆದುರಿಗೆ ಬರಬೇಕಾಯ್ತು. ಮಂದಿರದಲ್ಲೆಲ್ಲರೂ ಒಟ್ಟುಗೂಡಿ "ಹಾರೇ ರಾಮ್–ಹಾರೇ ರಾಮ್" ಎಂದು ಭಜಿಸುತ್ತಿದ್ದರು. ಕಿವಿಗೊಟ್ಟು ಕೇಳಿದೆ, ಅದೇ ಶಬ್ದ.


ಅರರೇ ! ಇದೇನು ಬಂತು. ಹರೇ ರಾಮ, ರಾಮ ರಾಮ ಹರೇ ಹರೇ ಈ ಮಾತುಗಳನ್ನು ಕೇಳಿದ್ದೆ. ಈ ಮಾತುಗಳೇ ತಿರುಗ ಮುರುಗ ಇದ್ದಿದ್ದನ್ನೂ ಕೇಳಿದ್ದೆ. ಆದರೆ, ಈ ಹಾರೇ ರಾಮ್—ಹೀಗೆಯೇ ಮುಂದಕ್ಕೆ ಗುದ್ದಲಿ ರಾಮ್—ಪಿಕಾಶಿ ರಾಮ್ ಎಂದೂ ಭಜಿಸುತ್ತಾರೆ ಹಾರೇ ಗುದ್ದಲಿ ರಾಮನಿಗೆ ಆಯುಧ ಮಾಡಬೇಕಾದರೆ—ಕೋದಂಡರಾಮನು ಹೋಗಿ ಹಾರೇ ರಾಮ್ ನಾಗಬೇಕಾದರೆ, ಭಜಕರೆಲ್ಲರೂ ರಜೋಗುಣ ಪ್ರಧಾನರಿರಬೇಕು. ಹಾಗೂ ಕುಸ್ತಿ ಎಂದರೆ ಅಸ್ತು ಎನ್ನುವರಿರಬೇಕು—ಲಡಾಯಿ ಎಂದರೆ, ಬಡಾಯಿ ಕೊಚ್ಚುವವರಿರಬೇಕು. ಮುಖ್ಯ ಯುದ್ಧಕ್ಕೆ ಎದೆ ಚಾಚುವವರಿರಬೇಕು. ಪ್ರಾಯಶಃ ಮರಾಠರೇ ಇರಬಹುದೇ, ವೀರ ಮರಾಠರಲ್ಲದೇ ಬೇರೆ ಯಾರು ಹೀಗೆ ರಣೋನ್ಮುಖ ರಾಮನನ್ನು ಭಜನೆ ಮಾಡುವವರು ಎಂದುಕೊಂಡು ಭಜನೆ ಮನೆಗೆ ಹೋದೆ. ಅವರ ಜೊತೆಯಲ್ಲಿ ನಾನೂ ಭಜನೆಗೆ ಸೇರಿಕೊಂಡೆ. ಮೆಲ್ಲ ಮೆಲ್ಲಗೆ ವಿಚಾರಿಸಿದೆ. ಎಲ್ಲರೂ ಸ್ಮಾರ್ತರೇ, ಎಲ್ಲರೂ ಬ್ರಾಹ್ಮಣರೇ, ಎಲ್ಲರೂ ಯುದ್ಧ ಎಂದರೆ ಹಿಂದೋಡುವವರೇ, ಕುಸ್ತಿ ಎಂದರೆ ನಾಸ್ತಿ ಎನ್ನುವವರೇ—ಲಡಾಯಿ ಎಂದರೆ ಗುಡಾಣದಲ್ಲಿ ಹೊಕ್ಕುವವರೇ —ಎಲ್ಲರೂ ಅಡಿಗೆಯವರೇ—ಕೊಠಡಿಯವರೇ.

ಆಗ ಅರ್ಥವಾಯಿತು. "ಹಾರೇ ರಾಮ್".



ಸಾರಥಿಯವರ

ಪಂತುಲಮ್ಮ



21—4—1944 ರಿಂದ

ಸ್ಟಾರ್ ಸಿನಿಮಾ, ಬಳ್ಳಾರಿಯಲ್ಲೂ

ಮತ್ತು

26—4—1944 ರಿಂದ

ಪ್ರಮೀಳಾ ಟಾಕೀಸ್, ಚಿತ್ತೂರಿನಲ್ಲೂ

ಪ್ರದರ್ಶಿಸಲ್ಪಡುತ್ತಿದೆ.

ವಿವರಗಳಿಗೆ—

ಚಂದ್ರಫಿಲ್ಮ್ಸ್ ಲಿಮಿಟೆಡ್,

ಗಾಂಧಿನಗರ, ಬೆಂಗಳೂರು

— **ಇವರಿಗೆ ಬರೆಯಿರಿ**

ಮೈಸೂರು ಲ್ಯಾಂಪ್ ವರ್ಕ್ಸ್

ಬೆಂಗಳೂರು.

ಸಾರ್ವಜನಿಕರ ತಿಳಿವಳಿಕೆಗಾಗಿ ಈ ಕೆಳಗೆ "ಮೈಸೂರು ಲ್ಯಾಂಪ್ಸ್" ಗಳ ನ್ಯಾಯವಾದ ಚಿಲ್ಲರೆ ಬೆಲೆಗಳು ಕೊಡಲ್ಪಟ್ಟಿವೆ. ಈ ಬೆಲೆಗಳು ಸಂಸ್ಥಾನಾಮುಳೆ ಜಾರಿಗೆ ಬರುತ್ತವೆ.

ಪ್ರಕಾಶ	ತರಹೆ		ದರ್ಜ ಬೆಲೆ ರೂ. ಆ. ಪೈ
10-30	ವಾಕ್ಯೂಂ	ಶುಭ್ರ Bc. ,, E.S.	27—0—0
44-60	,,	,,	30—0—0
40	ಗ್ಯಾಸ್	,,	32—0—0
60	,,	,,	34—0—0
75	,,	,,	38—0—0
100	,,	,,	46—0—0
150	,,	,,	64—0—0
200	,,	,,	85—0—0
300	,,	,,	125—0—0

ಮೈಸೂರು ದೇಶದ ಏಜಂಟರು :—

ಓರಿಯೆಂಟಲ್ ಎಲಕ್ಟ್ರಿಕ್ ಕಂಪೆನಿ,

ವಿಶ್ವೇಶ್ವರಪುರಂ, ಸಜ್ಜನ್‌ರಾಯರ ಪ್ಲೇಸ್,

ಬೆಂಗಳೂರು ಸಿಟಿ.

ಮೋಹನ್ ಪಿಕ್ಚರ್ಸ್ ಅವರ

ಇಂದ್ರಜಾಲಿಕ ರೋಮಾಂಚಕ ಚಿತ್ರ

** ಜಾದು - ಇ - ಕಿಸ್ಮತ್ **

ಶಿರಾಜ್ - ಶಾಂತದೇಶಾಯ್ - ಅಮೀನ ಅನ್ಸಾರಿ - ಗುಲಾಬ್

— ಮೊದಲಾದವರು ಪಾತ್ರವಹಿಸಿದ್ದಾರೆ —

ವಿದ್ಯುಚ್ಛಕ್ತಿಯ ಪುನಃಪ್ರವಾಹವು ಆರಂಭವಾದಕೂಡಲೆ

ಪ್ಯಾರಮೌಂಟ್ ಟಾಕೀಸಿನಲ್ಲಿ

ಪ್ರದರ್ಶನವಾಗುವುದನ್ನು ಗಮನಿಸಿರಿ.

ವಿವರಗಳಿಗೆ:

ಗುಡ್‌ವಿನ್ ಪಿಕ್ಚರ್ಸ್ ಕಾರ್ಪೊರೇಷನ್

ಸುಬೇದಾರ್ ಛತ್ರಂ ರಸ್ತೆ, ಬೆಂಗಳೂರು ಸಿಟಿ

ಅಲ್ಲದೆ, ಬೆಜವಾಡ — ತಿರುಚನಾಪಳ್ಳಿ — ಎರ್ನಾಕುಲಂ — ಶಾಖೆಗಳು.

— ಬರೆಯಿರಿ.

Printed by B. S. Iyengar, Bangalore City.
Publisher—B. N. Gupta, Editor—M. SHIVARAM,